ಸಂಪುಟ/Volume : 46
ಸಂಚಿಕೆ/Issue : 06
ಪುಟ/Pages : 12
ಬೆಲೆ/Price : ₹ 15/–

ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮಾರ್ಚ್ 2024 ಮಾಸ ಪತ್ರಿಕೆ

**Akhila Karnataka Shikshaka Samachar | March 2024 | Monthly**






ಮತದಾನ ಪ್ರಜೆಗಳ ಕರ್ತವ್ಯ
ತಪ್ಪದೇ ಮತದಾನ ಮಾಡೋಣ
ಭವ್ಯ ಭಾರತದ ಪ್ರಗತಿಗಾಗಿ

# ಮತದಾನ

A Journal of Karnataka Rajya Madhyamika Shikshaka Sangha (R.)

# ಸಂಪಾದಕೀಯ

ಪ್ರಾಚೀನ ಕಾಲದ ಗುರುಕುಲ ಪದ್ಧತಿಯಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಬಹಳ ಮಹತ್ವ ಪಡೆದ ಕೆಲವೇ ಕೆಲವು ಅಂಶಗಳಲ್ಲಿ ಪರೀಕ್ಷೆ ಮತ್ತು ಮೌಲ್ಯಮಾಪನ ಕಾರ್ಯಗಳು ತುಂಬಾ ಮಹತ್ವದ್ದು ಎನಿಸಿಕೊಂಡಿವೆ. ಪರೀಕ್ಷೆಗಳು ವಿದ್ಯಾರ್ಥಿ ಜೀವನದಲ್ಲಿ ತುಂಬಾ ಮಹತ್ವದ್ದು, ಎಂದು ಎಲ್ಲ ವಿದ್ಯಾರ್ಥಿಗಳು ಭಾವಿಸಿಕೊಳ್ಳುತ್ತಾರೆ. ತರಗತಿ ಕೊಠಡಿಯಲ್ಲಿ ನಡೆಯುವ ತಕ್ಷಣದ ಪರೀಕ್ಷೆಗೂ ಹಾಗೂ ಘಟಕ ಪರೀಕ್ಷೆಗೂ, ತಿಂಗಳ ಪರೀಕ್ಷೆಗೂ, ಮೂರು ತಿಂಗಳ ಪರೀಕ್ಷೆಗೂ, ಅರ್ಧವಾರ್ಷಿಕ ಪರೀಕ್ಷೆಗೂ, ಪರೀಕ್ಷಾ ಪೂರ್ವ ಸಿದ್ಧತಾ ಪರೀಕ್ಷೆಗೂ, ವಾರ್ಷಿಕ ಪರೀಕ್ಷೆಗೂ ಹೀಗೆ ವಿವಿಧ ತೇರ್ಗಡೆ ಪರೀಕ್ಷೆಗಳು ವಿದ್ಯಾರ್ಥಿಯು ಶೈಕ್ಷಣಿಕ ಪ್ರಗತಿಯಲ್ಲಿ ಮೈಲುಗಲ್ಲುಗಳು. ಈ ಪರೀಕ್ಷೆಗಳಂದ ವಿದ್ಯಾರ್ಥಿಗಳು ಪಡುವ ಕಷ್ಟ, ಆತಂಕ, ಭಯ, ಮಾನಸಿಕ ಒತ್ತಡ ಅನೇಕ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ದೈಹಿಕ ಆರೋಗ್ಯದ ಮೇಲೆಯೂ ಪರಿಣಾಮ ಬೀರುತ್ತವೆ. ಜೊತೆಯಲ್ಲಿ ಶಿಕ್ಷಕರ ಕಲಿಕಾ ಮಟ್ಟವು ವಿದ್ಯಾರ್ಥಿಗಳ ಪರೀಕ್ಷೆಗಳು ತಿಳಿಸುತ್ತವೆ. ಒಟ್ಟಾರೆ ವಿದ್ಯಾರ್ಥಿ ಮತ್ತು ಶಿಕ್ಷಕರ ಜೀವನದಲ್ಲಿ ಪರೀಕ್ಷೆಗಳ ಮೇಲೆ ಪರೀಕ್ಷೆಗಳೇ ಅದಕ್ಕೆ ಸಮಾನವಾದದ್ದು ಬೇರೇನು ಇಲ್ಲ.

ಇಂದು ಕರ್ನಾಟಕದಲ್ಲಿ 5,8 ಮತ್ತು 9ನೇ ತರಗತಿಯ ಪರೀಕ್ಷೆಯ ವಿಷಯ ನ್ಯಾಯಾಲಯದ ಮೆಟ್ಟಿಲೇರಿ ಕಣ್ಣಮುಚ್ಚಾಲೆ ಆಡುತ್ತಿರುವುದು ವಿದ್ಯಾರ್ಥಿಗಳು, ಶಿಕ್ಷಕರು, ಪಾಲಕರು ಮತ್ತು ಶಿಕ್ಷಣ ತಜ್ಞರಲ್ಲಿ ಆತಂಕವನ್ನು ಸೃಷ್ಟಿಸಿದೆ. ವಿದ್ಯಾರ್ಥಿಗಳು ಪರೀಕ್ಷೆಗೆ ತಯಾರಿ ಮಾಡಿಕೊಂಡು ಪರೀಕ್ಷೆ ಬರೆಯಬೇಕು ಎನ್ನುವಾಗ ಪರೀಕ್ಷೆಯ ದಿನಾಂಕಗಳೇ ಮಾಯವಾಗುತ್ತಿವೆ. ಪದೇ ಪದೆ ದಿನಾಂಕಗಳೂ ಮುಂದೂಡುವುದು ಮಕ್ಕಳಲ್ಲಿ ನಿರಾಶೆಯನ್ನು ಮೂಡಿಸಿವೆ.

ರಂಗು ರಂಗಿನ ಹಬ್ಬ ಹೋಳಿ ಭಾರತೀಯರಿಗೆ ಆಕರ್ಷಕ ಹಬ್ಬ. ಬಣ್ಣ ಆಡುವುದರ ಜೊತೆಯಲ್ಲಿ ನಮ್ಮಲ್ಲಿರುವ ದುಷ್ಟ ಶಕ್ತಿಗಳನ್ನು ಕಾಮನ ಸುಡುವುದರ ಮೂಲಕ ನಾಶಮಾಡಿ ಸಮಾಜದ ಸ್ವಾಸ್ತ್ಯದಲ್ಲಿ ನಾವೆಲ್ಲ ಒಂದಾಗಿರೋಣ ಎನ್ನುವ ಸಂಕೇತವೇ ಈ ಹೋಳಿ ಹಬ್ಬ. ಆದರೆ ಈ ಸಂದರ್ಭದಲ್ಲಿ ರಾಸಾಯನಿಕ ಮಿಶ್ರಿತ ಬಣ್ಣಗಳಿಂದ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತಿರುವುದರಿಂದಾಗಿ ಬಣ್ಣಗಳ ಆಯ್ಕೆಯಲ್ಲಿಯೂ ನಾವು ಮುನ್ನೆಚ್ಚರಿಕೆ ವಹಿಸುವು ಅವಶ್ಯವಿದೆ.

ವಿದ್ಯಾರ್ಥಿಗಳನ್ನು ಪರೀಕ್ಷೆಗಾಗಿ ಸನ್ನದ್ಧಗೊಳಿಸಿ, ನಿಮ್ಮ ಕರ್ತವ್ಯಗಳನ್ನು ಚೆನ್ನಾಗಿ ಪಾಲಿಸಿದ ಎಲ್ಲ ಶಿಕ್ಷಕ ಬಂಧುಗಳಿಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಶುಭವನ್ನು ಹಾರೈಸುತ್ತದೆ.

ಸಂಪಾದಕ

## ಸಂಪಾದಕ ಮಂಡಳಿ

**ಗೌರವ ಸಂಪಾದಕರು**
ಹೆಚ್. ನಾಗಭೂಷಣರಾವ್

**ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು**
ಜೆ. ಎಮ್. ಜೋಶಿ

**ವ್ಯವಸ್ಥಾಪಕ ಸಂಪಾದಕರು**
ಸಂದೀಪ ಬೂದಿಹಾಳ

**ಗೌರವ ಸಲಹೆಗಾರರು**
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

**ಸಂಪಾದಕ ಮಂಡಳಿ**
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

**ವಿನ್ಯಾಸಕಾರರು**
ಪ್ರೇರಣಾ

**ಕಛೇರಿ ವ್ಯವಸ್ಥಾಪಕರು**
ವರಲಕ್ಷ್ಮಿ ಕೆ. ಎನ್.

## ಪರಿವಿಡಿ

- ಲೋಕಸಮರ 2024: ನಿರ್ಣಾಯಕ? 3
- ಮಹಿಳಾ ದಿನ 4
- ರಂಗು ರಂಗಿನ ಹೋಳಿ ಹಬ್ಬ 5
- ಸರ್ಕಾರದ ಆದೇಶ 6
- ಸರ್ಕಾರದ ಆದೇಶ 7
- ಅನುಕರಣೀಯ ಕಲಿಕೆ 8
- ಭರವಸೆಯ ಬೆಳಕು 10
- ಗುರು–ಶಿಷ್ಯ ಸಂಬಂಧ 11
- ಪದ್ಮಶ್ರೀ ಡಾ॥ ಬಿರುಬಾಲಾ ರಾಭಾ 12

# ಲೋಕಸಮರ 2024: ನಿರ್ಣಾಯಕ?

**ಡಾ|| ಲೋಕೇಶ್**
**ಮುಖ್ಯಸ್ಥರು & ಸಂಯೋಜಕರು**
**'ಶಿಕ್ಷಣ ವಿಭಾಗ', NMKRV ಮಹಿಳಾ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು**



ಭಾರತ, ಜಗತ್ತಿನ ಬಹುದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ರಾಷ್ಟ್ರ. ಪ್ರಜಾಪ್ರಭುತ್ವದ ಆಶಯದಂತೆ ಪ್ರಜೆಯೇ ರಾಜ. ಪ್ರಜಾಪ್ರಭುತ್ವ ಪ್ರಜೆಗಳಿಂದ, ಪ್ರಜೆಗಳಿಗಾಗಿ ಹಾಗೂ ಪ್ರಜೆಗಳಿಗೋಸ್ಕರ ಕಾರ್ಯ ನಿರ್ವಹಿಸುವ ವ್ಯವಸ್ಥೆಯೇ ಆಗಿದೆ. ಪ್ರಜಾಪ್ರಭುತ್ವದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ಚುನಾವಣೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಚುನಾವಣೆಗಳ ಮುಖಾಂತರ ಜನಪ್ರತಿನಿಧಿಗಳ ಆಯ್ಕೆ ನಡೆಯುತ್ತದೆ. ಇಂತಹ ಚುನಾವಣೆಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆಯುತ್ತವೆ. ರಾಜ್ಯಮಟ್ಟದಲ್ಲಿ ನಡೆಯುವ ಚುನಾವಣೆಗಳು ವಿಧಾನಸಭೆ ಹಾಗೂ ರಾಷ್ಟ್ರ ಮಟ್ಟದಲ್ಲಿ ನಡೆಯುವ ಚುನಾವಣೆಗಳು ಲೋಕಸಭೆಯ ಫಲಿತಾಂಶವನ್ನು ನಿರ್ಧರಿಸುತ್ತವೆ. ಯಾವ ರಾಜಕೀಯ ಪಕ್ಷ ಹೆಚ್ಚು ಗೆಲುವು ಸಾಧಿಸಿರುವುದೋ ಅದು ಅಧಿಕಾರದ ಚುಕ್ಕಾಣಿ ಹಿಡಿದು ರಾಜ್ಯ ಮತ್ತು ರಾಷ್ಟ್ರವನ್ನು ಮುನ್ನಡೆಸುತ್ತವೆ. ಭಾರತ ಸ್ವಾತಂತ್ರ್ಯ ಗಳಿಸಿದ ನಂತರ ಅನೇಕ ಚುನಾವಣೆಗಳು ನಡೆದು ಅದರ ಪರಿಣಾಮವಾಗಿ ಹಲವಾರು ಕೇಂದ್ರ ಸರ್ಕಾರಗಳು ಆಡಳಿತ ನಡೆಸಿವೆ. ಭಾರತದ ಸ್ವಾತಂತ್ರ್ಯದಿಂದ 2014ರವರೆಗೆ ಸರಿಸುಮಾರು 67 ವರ್ಷಗಳಲ್ಲಿ ದೇಶದಲ್ಲಿ ಆದ ಪ್ರಗತಿ, ಸರ್ಕಾರಗಳು ಮತ್ತು ಅವುಗಳ ಸಾಧನೆಯನ್ನು ಒಮ್ಮೆ ಅವಲೋಕನ ಮಾಡಿದರೆ ಅಭಿವೃದ್ಧಿಯ ಮಿಡಿತ ತಿಳಿಯುತ್ತದೆ. 2014 ರಿಂದ ಇಲ್ಲಿಯವರೆಗೆ ದೇಶದಲ್ಲಿ ಆದ ಕ್ಷಿಪ್ರ ಪ್ರಗತಿಯು ರಾಷ್ಟ್ರವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೊಳಿಸಿ ಪ್ರಗತಿಯ ಕ್ರಾಂತಿಯನ್ನು ಉಂಟುಮಾಡಿದೆ. ದಶಕದ ದೇಶದ ಆಡಳಿತ ಸುಭದ್ರವಾಗಿದ್ದು ನಾಯಕತ್ವ ಧೀಮಂತ ಪ್ರಧಾನಿಯ ಅಡಿಯಲ್ಲಿರುವುದು ನಿಜಕ್ಕೂ ಶ್ಲಾಘನೀಯ. ಸನ್ಮಾನ್ಯ ಪ್ರಧಾನಮಂತ್ರಿಗಳಾದ ಮೋದಿಯವರ ರಾಜನೀತಿಜ್ಞತೆ ಮತ್ತು ದೂರದೃಷ್ಟಿ ನಾಯಕತ್ವ ಭಾರತವನ್ನು ಜಗತ್ತಿನ ಇತರೇ ಪ್ರಭಾವಿ ರಾಷ್ಟ್ರಗಳ ಮುಂಚೂಣಿಯಲ್ಲಿರಿಸಿರುವುದು ಭಾರತೀಯರಾದ ನಮಗೆಲ್ಲ ಹೆಮ್ಮೆಯ ವಿಚಾರವಾಗಿದೆ. ಬದಲಾದ ಪರಿಸ್ಥಿತಿಯಲ್ಲಿ ಇಡೀ ಜಗತ್ತು ಭಾರತದ ಅಭಿಪ್ರಾಯ ಕೇಳಿ ಅಂತರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹಾರ ನಿರ್ಧರಿಸುವ ಸ್ಥಿತಿಗೆ ತಲುಪಿದೆ.

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿ 75 ಸಂವತ್ಸರಗಳು ತುಂಬಿದೆ. ಈ ಶುಭ ಸಂದರ್ಭದಲ್ಲಿ ಸುಭದ್ರ ಸರ್ಕಾರ ಕೇಂದ್ರದಲ್ಲಿ ಅಧಿಕಾರ ಚುಕ್ಕಾಣಿ ಹಿಡಿದಿರುವುದು ನಿಜಕ್ಕೂ ಪ್ರಶಂಸನೀಯ. ಕಳೆದ ದಶಕದಿಂದ ಇಲ್ಲಿಯವರೆಗೆ ಕೇಂದ್ರ ಸರ್ಕಾರ ಜಾರಿಗೊಳಿಸಿದ ಕೆಲವೊಂದು ಉತ್ಕೃಷ್ಟ ಯೋಜನೆಗಳನ್ನು ನೋಡುವುದಾದರೆ,

**ಪ್ರಧಾನಮಂತ್ರಿ ಉಜ್ವಲ ಯೋಜನೆ:** ಕಳೆದ ಒಂಭತ್ತು ವರ್ಷಗಳಲ್ಲಿ 17 ಕೋಟಿ ಬಡವರಿಗೆ ಈ ಸೌಕರ್ಯ ದೊರಕಿದೆ. ಮೇ–2024 ರವರೆಗೆ 14.56 ಕೋಟಿ ಎಲ್.ಪಿ.ಜಿ ಬಳಕೆದಾರರು ಇದ್ದು, 2023– ಮಾರ್ಚ್ ಹೊತ್ತಿಗೆ 31.36 ಕೋಟಿ ಜನ ಬಳಸುವಂತಾಗಿರುವುದು ಇತಿಹಾಸ. ಪ್ರಧಾನಮಂತ್ರಿ ಉಜ್ವಲ ಯೋಜನೆಯಿಂದ ಶೇಕಡಾ 62% ಹೆಚ್ಚಳವಾದದ್ದು ಅಭಿವೃದ್ಧಿಯ ಮೈಲಿಗಲ್ಲಾಗಿದೆ.

**ಉನ್ನತ ಶಿಕ್ಷಣ:** ಇಡೀ ರಾಷ್ಟ್ರದಲ್ಲಿ 2014ರ ಹೊತ್ತಿಗೆ 723 ವಿಶ್ವವಿದ್ಯಾಲಯಗಳು ಇದ್ದದ್ದು ತದನಂತರ ವಿಶ್ವವಿದ್ಯಾಲಯಗಳ ಸಂಖ್ಯೆ 1113ಕ್ಕೆ ಏರಿಕೆಯಾಗಿದೆ. ಐಐಟಿ, ಐಐಎಂ ಹಾಗೂ ತತ್ಸಮಾನ ಕಾಲೇಜುಗಳ ಸಂಖ್ಯೆ 2014ರ ಹೊತ್ತಿಗೆ 38,498ರಷ್ಟಿತ್ತು ತದನಂತರ 2023ಕ್ಕೆ ಇದೇ ಕಾಲೇಜುಗಳ ಸಂಖ್ಯೆ 43,796ಕ್ಕೆ ಏರಿಕೆಯಾಗಿದೆ. ಇವುಗಳಲ್ಲಿ ಶೇಕಡಾ 43ರಷ್ಟು ಗ್ರಾಮೀಣ ಪ್ರದೇಶದಲ್ಲಿವೆ ಎಂಬುದು ಗಮನಾರ್ಹ. ಅತಿ ದೊಡ್ಡ ರಸ್ತೆ ಸಾರಿಗೆ ಹೊಂದಿರುವ ಜಗತ್ತಿನ ಎರಡನೇ ರಾಷ್ಟ್ರವಾಗಿರುವುದು ಹೆಮ್ಮೆಯ ವಿಚಾರ. 2014 ಮತ್ತು ಅದಕ್ಕೂ ಮುಂಚೆ ನಮ್ಮಲ್ಲಿ ದಿನಕ್ಕೆ ಕೇವಲ 12 ಕಿಲೋಮೀಟರ್ ರಸ್ತೆ ನಿರ್ಮಿಸಲು ಸಾಧ್ಯವಾಗುತ್ತಿತ್ತು ಆದರೆ ಈಗ ಆ ಸಾಮರ್ಥ್ಯ ದಿನಕ್ಕೆ 29 ಕಿಲೋಮೀಟರ್ ರಸ್ತೆ ನಿರ್ಮಿಸುವಷ್ಟು ಏರಿಕೆಯಾಗಿರುವುದು ಶ್ಲಾಘನೀಯ.

**ಪ್ರಧಾನಮಂತ್ರಿ ಜನೌಷಧಿ ಕೇಂದ್ರ ಮತ್ತು ಕರೋನ ಲಸಿಕೆ:** ಆಯುಷ್ಮಾನ್ ಭಾರತ ಯೋಜನೆಯ ಮೂಲಕ ತುರ್ತು ಸಮಯದಲ್ಲಿ ಔಷಧಿಗಳು ಶ್ರೀಸಾಮಾನ್ಯನಿಗೆ ಸಿಗುವಂತೆ ಮಾಡಿ ಆ ಮೂಲಕ ಶೇ 30ರಿಂದ 40 ರಷ್ಟು ಮಾರುಕಟ್ಟೆಗಿಂತ ಕಡಿಮೆ ದರದಲ್ಲಿ ಔಷಧಿ ಒದಗಿಸಿ ಸರ್ವರ ಆರೋಗ್ಯ ಕಾಪಾಡುವ ಸಂಕಲ್ಪ ನಿಜಕ್ಕೂ ಅಭಿನಂದನಾರ್ಹವಾದದ್ದು. ಕೋಟ್ಯಾಂತರ ಭಾರತೀಯರಿಗೆ ಎರಡು ಬಾರಿ ಕರೋನಾ ಲಸಿಕೆಯನ್ನು ಉಚಿತವಾಗಿ ನೀಡಿದ್ದು ಸಹ ಈಗ ಇತಿಹಾಸ.

**ಡಿಜಿಟಲ್ ಇಂಡಿಯಾ:** ಭಾರತವನ್ನು ಡಿಜಿಟಲ್ ಇಂಡಿಯಾ ಆಗಿ ಪರಿವರ್ತಿಸಿ ದಿನನಿತ್ಯದ ಎಲ್ಲ ವ್ಯವಹಾರವನ್ನು ಡಿಜಿಟಲೀಕರಣ ಹೊಂದುವಂತೆ ಮಾಡಲಾಗಿದೆ. ಡಿಜಿಲಾಕರ್‌ನಲ್ಲಿ ನಾಗರೀಕರ ಪ್ರಮುಖ ಗುರುತಿನ ದಾಖಲೆಗಳಾದ ಆಧಾರ್‌ಕಾರ್ಡ್, ವಾಹನ ಚಾಲನ ಪರವಾನಿಗೆಗಳನ್ನು ಡೌನ್‌ಲೋಡ್‌ಗೆ ಅವಕಾಶ ಮಾಡಿರುವುದು ಶ್ರೀಸಾಮಾನ್ಯನಿಗೆ ದೊರೆತ ಅತ್ಯಂತ ಒಳ್ಳೆಯ ಸೌಲಭ್ಯವೇ ಆಗಿದೆ.

**ಕಾಶ್ಮೀರ ವಿಶೇಷ ಸ್ಥಾನಮಾನ ರದ್ದು:** ಕೇಂದ್ರ ಸರ್ಕಾರ 2019ರಲ್ಲಿ ಕಾಶ್ಮೀರ ವಿಶೇಷ ಸ್ಥಾನಮಾನ ರದ್ದುಗೊಳಿಸಿದ್ದು ಒಂದು ಚಾರಿತ್ರಿಕ ನಿರ್ಣಯವೇ ಆಗಿದೆ. ತತ್ಪರಿಣಾಮ ಕಾಶ್ಮೀರ ಮತ್ತು ಲಡಾಕ್ ಎಂಬ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶಗಳ ಘೋಷಣೆ ಮಾಡಲಾಗಿದೆ. ಬಾಲಾಕೋಟ್ ಸರ್ಜಿಕಲ್ ದಾಳಿಯು ಸಹ ಐತಿಹಾಸಿಕ ತೀರ್ಮಾನವೇ ಆಗಿದೆ. ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತಂದವರ ಸ್ಥಿತಿ ಏನಾಗುತ್ತದೆ ಎಂಬುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಇನ್ನೊಂದಿಲ್ಲ.

**ಜಲ್ ಜೀವನ್ ಮಿಷನ್:** ಪ್ರತಿ ಮನೆಗೆ ನೀರು (ನಲ್ ಸೇ ಜಲ್) ಎಂಬ ಪರಿಕಲ್ಪನೆಯೊಂದಿಗೆ ಭಾರತದ ಗ್ರಾಮೀಣ ಪ್ರದೇಶದಲ್ಲಿನ 12.60ಕೋಟಿ ಮನೆಗಳಿಗೆ ನೀರಿನ ಸೌಲಭ್ಯ ಒದಗಿಸಿರುವುದು ಗ್ರಾಮೀಣ ಭಾಗದ ಜನರಿಗೆ ವರದಾನವೇ ಆಗಿದೆ.

**ಪುಟ 9 ಕ್ಕೆ ➢**

# ಮಹಿಳಾ ದಿನ



**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

'ವಿಶ್ವಗುರು'ವಿನ ಪಟ್ಟವನ್ನು ಹೊಂದಿ, ಜಗತ್ತಿಗೇ ಒಂದು ಆದರ್ಶ ಸಂಸ್ಕೃತಿಯನ್ನು ನೀಡಿದ್ದ ದೇಶ ನಮ್ಮ ಭವ್ಯಭಾರತ. ಈ ಭವ್ಯವೆಂಬ ಶಬ್ದ ಕೇವಲ ಅದರ ವಿಸ್ತಾರಕ್ಕಾಗಲೀ, ಜನಸಂಖ್ಯೆಗಾಗಲೀ ಮಾತ್ರವೇ ಸಂಬಂಧಿಸಿದ್ದಲ್ಲ, ಅದು ಅದರ ವಿಶಿಷ್ಟವಾದ ಸಂಸ್ಕೃತಿಗೆ ಅನ್ವಯಿಸಿದ್ದು. ಅದರಲ್ಲಿರುವ ಹಲವಾರು ಅಮೂಲ್ಯವಾದ ಅಂಶಗಳು ಸಾರ್ವಕಾಲಿಕವಾದುವು. ಅವು ನಿರಂತರವಾಗಿ ತಮ್ಮ ಮೌಲ್ಯವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಸಮಾಜದ ಆರೋಗ್ಯ ರಕ್ಷಣೆ ಮಾಡುವಲ್ಲಿ, ಪ್ರಗತಿಯ ದಾರಿಯಲ್ಲಿ ಮುನ್ನಡೆಸುವಲ್ಲಿ ಮಾರ್ಗದರ್ಶೀಸೂತ್ರಗಳನ್ನು ಹೊಂದಿರುವಂತಹವು.

ಈ ಅಂಶಗಳಲ್ಲಿ, ಭಾರತೀಯ ನಾರಿಗೆ ನಮ್ಮ ದೇಶದಲ್ಲಿ ಹಿಂದಿನಿಂದಲೂ ನೀಡಿರುವ ಮಹತ್ತ್ವದ ಸ್ಥಾನವೂ ಒಂದು. ಅದನ್ನೇ ನಮ್ಮ ಧರ್ಮಶಾಸ್ತ್ರವನ್ನು ಬರೆದ ಋಷಿ ಮನುವಿನ ಧರ್ಮಗ್ರಂಥದಲ್ಲಿ 'ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ' ಎಂದು ಹೇಳಿದೆ. ಅಂದರೆ 'ಎಲ್ಲಿ ನಾರಿಯರಿಗೆ ಪೂಜ್ಯ ಸ್ಥಾನವು ದೊರೆಯುವುದೋ ಅಲ್ಲಿಯೇ ದೇವತೆಗಳೂ ವಾಸಿಸುತ್ತಾರೆ' ಎಂದರ್ಥ. ಹಾಗೆಂದರೆ ಭಾರತದ ನೆಲವು ದೇವತೆಗಳು ನೆಲೆಸಿರುವರೆಂಬ ಈ ಪವಿತ್ರವಾದ ಅರ್ಥಕ್ಕೆ ಸಾಕ್ಷಿಯಾಗುತ್ತದೆಯೆಂದರ್ಥ. ಹೀಗೆ ಪೂಜ್ಯ ಸ್ಥಾನವನ್ನು ಪಡೆದಿದ್ದ ಮಹಿಳೆಯರ ನಿದರ್ಶನಗಳು ಹೇರಳವಾಗಿ ನಮ್ಮ ಪುರಾಣಗಳಲ್ಲಿ, ಇತಿಹಾಸದಲ್ಲಿ ದೊರೆಯುತ್ತವೆ. ಅಂದರೆ ನಮ್ಮ ಭಾರತೀಯ ಮಹಿಳೆ ಎಂದಿನಿಂದಲೂ ತನ್ನ ಹಿರಿಮೆಯಾದ, ಸತ್ತ್ವ, ಧೈರ್ಯ, ಸ್ಥೈರ್ಯ, ತ್ಯಾಗ, ಮನೋದಾರ್ಢ್ಯ ಮುಂತಾದ ಗುಣಗಳಿಂದ ಸಮಾಜದ ಹಿತರಕ್ಷಣೆಯನ್ನು ಮಾಡುವಲ್ಲಿ ಗಣನೀಯವಾದ ಕೊಡುಗೆಯನ್ನು ಕೊಡುತ್ತಲೇ ಬಂದಿದ್ದಾಳೆ. ಎಲ್ಲ ಕ್ಷೇತ್ರಗಳಲ್ಲಿ ಆಕೆಯ ಈ ಸೇವೆ ನಡೆಯುತ್ತಲೇ ಬಂದಿದೆ. ಆಕೆ, ಈ ಭಾರತೀಯ ನಾರಿ ಸಮಾಜದ ಮುಂದೆ ತನ್ನ ಸ್ಥಾನಕ್ಕಾಗಿ, ಗೌರವಕ್ಕಾಗಿ, ಮಾನ್ಯತೆಗಾಗಿ ಅಪೇಕ್ಷಿಸುವ, ನಿರೀಕ್ಷಿಸುವ, ಒತ್ತಾಯಿಸುವ ದುರ್ಬಲಳಾಗಿ ಎಂದೂ ಇರಲಿಲ್ಲ. ಅಂತಹ ಪರಿಸ್ಥಿತಿಯನ್ನು ಈ ದೇಶದ ನೆಲ ಎಂದೂ ಕೊಟ್ಟಿಲ್ಲ. ಅದಕ್ಕೇ ಆಕೆಯ ಮೌಲಿಕವಾದ ಕೊಡುಗೆಯಿಲ್ಲದ ಕಾಲಘಟ್ಟವೇ ನಮ್ಮ ಚರಿತ್ರೆಯಲ್ಲಿಲ್ಲವೆನ್ನಬಹುದು. ಆದುದರಿಂದ ಮಹಿಳಾದಿನವೆಂದು ಒಂದು ನಿರ್ದಿಷ್ಟವಾದ ದಿನದಂದು ಆಕೆಯನ್ನು ಗುರುತಿಸುವ ಅಗತ್ಯವೇ ನಮ್ಮ ಪರಂಪರೆಯಲ್ಲಿರಲಿಲ್ಲ. ಏಕೆಂದರೆ ಆಕೆಯ ಪ್ರಾತಿನಿಧ್ಯ, ಪ್ರಾಮುಖ್ಯ ಎಲ್ಲ ಕಾಲದಲ್ಲಿಯೂ ಎಲ್ಲ ಕ್ಷೇತ್ರಗಳಲ್ಲಿಯೂ ಅವ್ಯಾಹತವಾಗಿ ಉಳಿದುಕೊಂಡೇ ಬಂದಿದೆ.

ಆದರೆ ಬದಲಾದ ಕಾಲದಲ್ಲಿ ನಡೆದ ಹಲವಾರು ಹೊರಗಿನ ಆಕ್ರಮಣಗಳ ಕಾರಣದಿಂದ, ಆಕೆಯ ಸ್ಥಾನ ಎರಡನೇ ಸ್ಥಾನಕ್ಕಿಳಿದು, ಪರಾವಲಂಬಿಯಾಗಿಯೂ, ದಬ್ಬಾಳಿಕೆ, ದೌರ್ಜನ್ಯಗಳಿಗೆ ತುತ್ತಾಗಬೇಕಾದುದರಿಂದಲೂ, ಶೋಷಣೆಯ ಬಲಿಪಶು ವಾಗಬೇಕಾದುದರಿಂದಲೂ ಭಾರತೀಯ ಮಹಿಳೆಯು ಮಧ್ಯಕಾಲದಲ್ಲಿ ಸಮಾಜದ ಅತಿಯಾದ ನಿಯಂತ್ರಣಕ್ಕೆ ಒಳಗಾಗಿ ತನ್ನ ಅಸ್ತಿತ್ವಕ್ಕೇ ಹೋರಾಟ ನಡೆಸಬೇಕಾಗಿ ಬಂದುದು ಆಕೆಯ ದುರ್ದೈವ. ಹಾಗಾಗಿ ಮಹಿಳಾ ದಿನವೆಂದು ಪ್ರಪಂಚದಾದ್ಯಂತ ಒಂದು ದಿನವನ್ನು ಗುರುತಿಸಿ ಸಂಭ್ರಮಿಸುವಂತೆ ಭಾರತದಲ್ಲಿಯೂ ಸಹ ಆಚರಣೆ ಮಾಡುವ ಸಂಪ್ರದಾಯ ಜಾರಿಯಾಯಿತು.

ಈ ನಿಟ್ಟಿನಲ್ಲಿ ಕೆಲವು ಉದಾಹರಣೆಗಳನ್ನು ಗಮನಿಸಬಹುದು.

ನಮ್ಮ ಸಂಸ್ಕೃತಿಯ ಬೆನ್ನೆಲುಬಾದ, ಆಧಾರಸ್ತಂಭವಾದ ಧರ್ಮವೆಂಬ ಶಕ್ತಿಯನ್ನು ಮೈದುಂಬಿಕೊಂಡ ಸ್ತ್ರೀರತ್ನಗಳ ವಿಷಯವು ವೇದಗಳ ಕಾಲದಿಂದಲೂ ಪ್ರಸ್ತಾಪಿತವಾಗಿದೆ. ಋಷಿಕೆಯರು, ಬ್ರಹ್ಮವಾದಿನಿಯರು, ಗುರುಕುಲದ ಹೊಣೆಹೊತ್ತು ನಿರ್ವಹಿಸುತ್ತಿದ್ದರು. ಮಂತ್ರದ್ರಷ್ಟಾರರಾದ ಋಷಿಗಳ ಪತ್ನಿಯರಾಗಿ ಯಜ್ಞ, ಯಾಗಾದಿಯಾಗಿ ಅವರ ಎಲ್ಲ ಧಾರ್ಮಿಕ ಕಾರ್ಯಗಳಲ್ಲಿ ಸಹಭಾಗಿಗಳಾಗಿದ್ದರು. ಲೋಕಕಲ್ಯಾಣದ ಕಾರ್ಯಗಳಲ್ಲಿ ತಮ್ಮ ಕರ್ತವ್ಯಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದರು. ಅದೇ ರೀತಿ ಇತಿಹಾಸದಲ್ಲಿ ದಾಖಲೆಗೊಂಡ ವೀರ, ಧೀರ, ದಕ್ಷ ಮಹಿಳೆಯರ ಸಂಖ್ಯೆಯೇನೂ ಕಡಿಮೆಯಿಲ್ಲ. ಗಾರ್ಗಿ, ಮೈತ್ರೇಯಿ, ಲೋಪಾಮುದ್ರಾ, ಸುಲಭಾ, ಅಪಾಲಾ ಅರುಂಧತೀ, ಅನಸೂಯೆ, ರೇಣುಕಾ ಮುಂತಾದ ಇನ್ನೂ ಹಲವರು ಒಂದು ಕಡೆಗಾದರೆ ದೇವಿ ಅಹಿಲ್ಯಾಬಾಯಿ, ರಾಜ್ಯದ ಚುಕ್ಕಾಣಿ ಹಿಡಿದು ಶತ್ರುಗಳನ್ನು ಹಿಮ್ಮೆಟ್ಟಿಸುವುದರೊಂದಿಗೆ ರಾಜ್ಯ ವಿಸ್ತಾರವನ್ನೂ ಮಾಡಿದವರು, ರಾಜ್ಯದಲ್ಲಿ ಧರ್ಮಸ್ಥಾಪನೆಯನ್ನು ಯಶಸ್ವಿಯಾಗಿ ಮಾಡುತ್ತ, ಪ್ರಜೆಗಳು ಧರ್ಮಮಾರ್ಗದಲ್ಲಿ ನಡೆಯುವಂತೆ ಮಾರ್ಗದರ್ಶನ ಮಾಡಿದವರು, ನಿಸ್ವಾರ್ಥವಾಗಿ, ತ್ಯಾಗ ಮನೋಭಾವದಿಂದ ಬದುಕಿದವರು, ತಮ್ಮ ಹೆಸರನ್ನು ಚಿರಸ್ಥಾಯಿಯಾಗಿಸಿದ್ದಾರೆ. ಅಷ್ಟೇ ಅಲ್ಲ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುತ್ತ, ಅವರಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದವರು. ರಾಜ್ಯರಕ್ಷಣೆಯ ಕಾರ್ಯಕ್ಕೆ ಅವರನ್ನೂ ಸಜ್ಜುಗೊಳಿಸಿ ಅವರಲ್ಲಿ ಶೌರ್ಯಪರಾಕ್ರಮಗಳನ್ನು ತುಂಬಿ ಧೀರವನಿತೆಯರನ್ನಾಗಿ ರೂಪಿಸಿದವರು ಅದೆಷ್ಟೋ ಮಂದಿ. ದೇಶದಾದ್ಯಂತ ನೂರಾರು ದೇವಾಲಯಗಳ ಜೀರ್ಣೋದ್ಧಾರ, ಧರ್ಮಛತ್ರಗಳ ನಿರ್ಮಾಣ ಮಾಡಿಸಿ ಧಾರ್ಮಿಕವಾಗಿ ಜನ ಜಾಗೃತಿಯನ್ನು ಮಾಡಿ, ಇಂದಿಗೂ ಆ ಪುಣ್ಯಕ್ಷೇತ್ರಗಳಲ್ಲಿ ತನ ನ ಹೆಸರು ಶಾಶ್ವತವಾಗಿಸಿದ ದೇವಿ ಅಹಿಲ್ಯಾಬಾಯಿಯಂತಹ ಧೀಮಂತ ಮಹಿಳೆಯನ್ನು ಮರೆಯಲು ಭವಿಷ್ಯದ ಜನಾಂಗಕ್ಕೆ ಸಾಧ್ಯವೇ? ಸದಾ ಕಾಲಕ್ಕೂ ವಂದನೀಯರಾದ ಇಂತಹ ಮಹಿಳಾ ರತ್ನಕ್ಕೆ ವರ್ಷದ ಒಂದು ದಿನದ ಸ್ಮರಣೆಯ ಅಗತ್ಯವಿದೆಯೆ? ಹತ್ತನೇ ಶತಮಾನದಲ್ಲಿದ್ದ ಹಲವಾರು ಜೈನ ಮಹಿಳೆಯರು ದಾನಚಿಂತಾಮಣಿ ಅತ್ತಿಮಬ್ಬೆಯೂ ಸೇರಿದಂತೆ ತಮ್ಮ ಘನ ವ್ಯಕ್ತಿತ್ವದಿಂದ ಇಂದಿಗೂ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಹನ್ನೆರಡನೇ ಶತಮಾನದಲ್ಲಿದ್ದ ಶಿವಶರಣೆ ಅಕ್ಕಮಹಾದೇವಿಯ ಹೆಸರು ಮರೆಯುವಂತಹುದೆ? ಸಮಾಜಕ್ಕೆ ಆಕೆ

ಪುಟ 9 ಕ್ಕೆ ➤

# ರಂಗು ರಂಗಿನ ಹೋಳಿ ಹಬ್ಬ

ಗಂಗಾಧರಾಚಾರಿ
ಉಪಾಧ್ಯಕ್ಷರು, ಕ.ರಾ.ಮಾ.ಶಿ.ಸಂ,
ರಾಮನಗರ



ಭಾರತೀಯ ಸಂಸ್ಕೃತಿಯಲ್ಲಿ ಮಾನವ ತನ್ನ ಜೀವಿತಾವಧಿಯಲ್ಲಿ ಧರ್ಮ ಮಾರ್ಗ ಆಧರಿಸಿ ನಡೆಯಲು ವಾರ್ಷಿಕವಾಗಿ ನಿಸರ್ಗದ ಕಾಲಕ್ಕೆ ತಕ್ಕಂತೆ ಹಲವು ವಿಶೇಷ ಹಬ್ಬ ಹರಿದಿನದ ಆಚರಣೆ ಮಾಡುತ್ತಾ ಬಂದಿರುವುದು ನಮ್ಮ ಸಂಪ್ರದಾಯ. ಪ್ರತಿಯೊಂದು ಹಬ್ಬ ತನ್ನದೇ ಆದ ವಿಶೇಷ ಮೌಲ್ಯ ಹೊಂದಿದೆ. ಶಿಶಿರ ಋತುವಿನ ಪಾಲ್ಗುಣ ಮಾಸದಲ್ಲಿ ಪೌರ್ಣಿಮೆಯ  ದಿನವನ್ನು "ಕಾಮನ ಹುಣ್ಣಿಮೆ" ವಸಂತಹುಣ್ಣಿಮೆ", " ಹೋಳಿಹಬ್ಬ", "ರಂಗಪಂಚಮಿ", "ಕಾಮದಹನ" ಎಂದು ಆಚರಿಸುತ್ತೇವೆ. ನಮ್ಮ ಹಿಂದೂ ದಿನಚರಿಯಂತೆ  ವರ್ಷದ ಕಟ್ಟಕಡೆಯ ಹಬ್ಬವಾಗಿದೆ. ನಂತರ ಯುಗಾದಿಯ ಹೊಸ ವರ್ಷ ಆರಂಭವಾಗುತ್ತದೆ.

ಕಾಮನ ಹಬ್ಬ ಬಂತೆಂದರೆ ಬಹುತೇಕ ಎಲ್ಲರಿಗೂ ಚಿಕ್ಕಂದಿನ ಘಟನೆಗಳು ನನ್ನಂತೆಯೇ ಸಹಜವಾಗಿ ಎಲ್ಲರ ಮನದಲ್ಲಿ ಮೂಡಿ ಬರುತ್ತವೆ. ಗುಂಪಾಗಿ ಗೆಳೆಯರೆಲ್ಲಾ ಸೇರಿ ಕಾಮಣ್ಣನ ಮಕ್ಕಳು ಎಂದು ಊರಿನ ನಮ್ಮ ಹಳ್ಳಿಯಲ್ಲಿ ಓಣಿ ಓಣಿಗಳಲ್ಲಿ ತಿರುಗಾಡಿದ್ದುದು ಕೆಲವು ಮನೆಗಳ ಮುಂದೆ ಹಳೇ ಮಡಿಕೆಗೆ ಬೂದಿ ತುಂಬಿ ಎಸೆಯುವುದು, ಕಟ್ಟಿಗೆ ಕದಿಯುವುದು ತಮಟೆ ಬಾರಿಸುತ್ತಾ ಕಾಮನ ಮೂರ್ತಿ ದಹನ ಮಾಡುವುದು, ಪುರುಷರು, ಮಹಿಳೆಯರು, ಮಕ್ಕಳು ಬಣ್ಣ ಎರಚುವುದು, ಜ್ಞಾಪಕ ಬರುತ್ತದೆ. ಆ ಹಂತದಲ್ಲಿ ಈ ಹಬ್ಬದ ಮಹತ್ವದ ಕುರಿತು ನಮಗೆ ಹೆಚ್ಚು ತಿಳಿಯದಿದ್ದರೂ ಹಿರಿಯರು ಹೇಳಿದ ಕಥೆಗಳನ್ನು ಕೇಳಿ ತಿಳಿದಿದ್ದೇವೆ. ಆದ್ದರಿಂದ ನಾವುಗಳೂ ಸಹ ಈ ಹಬ್ಬದ ಮಹತ್ವ ಹಿನ್ನೆಲೆಯ ಬಗ್ಗೆ ಮುಂದಿನ ಪೀಳಿಗೆಗೆ ತಿಳಿಸುವ ಪ್ರಯತ್ನ ಮಾಡೋಣ.

ಪುರಾಣ ಕಥೆ: ತಾರಕಾಸುರನೆಂಬ ರಾಕ್ಷಸ ರಾಜ ಶಿವನಿಗೆ ಜನಿಸಿದ ಏಳು ದಿನದ ಮಗುವಿನಿಂದ ಮಾತ್ರವೇ ತನಗೆ ಸಾವು ಬರಲಿ ಎಂದು ಶಿವನಿಂದ ವರವನ್ನು ಪಡೆದನು. ವರ ಬಲದ ಸೊಕ್ಕಿನಿಂದ ಲೋಕದಲ್ಲಿ ಮೆರೆಯುತ್ತಾನೆ. ಆತನ ಉಪಟಳ ತಾಳಲಾರದೇ ಅವನ ಸಂಹಾರಕ್ಕೆ ದೇವತೆಗಳು ಚಿಂತಾಕ್ರಾಂತರಾಗುತ್ತಾರೆ. ದಕ್ಷಯಜ್ಞದಲ್ಲಿ ತನ್ನ ಮಡದಿ ದಾಕ್ಷಾಯಿಣಿಯನ್ನು ಕಳೆದುಕೊಂಡು ಪರಶಿವನು ಯೋಗ ಸಮಾಧಿಯಲ್ಲಿರುತ್ತಾನೆ. ಅದೇ ರೀತಿ ಪಾರ್ವತಿಯೂ ಶಿವನಿಗಾಗಿ ತಪಸ್ಸು ಮಾಡುತ್ತಿದ್ದ ಕಾರಣ ಶಿವ ಪಾರ್ವತಿಯರಿಬ್ಬರೂ ಒಂದುಗೂಡದೆ ಮಕ್ಕಳಾಗುವಂತಿರಲಿಲ್ಲ. ಹೇಗಾದರೂ ಮಾಡಿ ಶಿವನ ತಪಸ್ಸನ್ನು ಭಂಗಮಾಡಬೇಕೆಂದು ನಿರ್ಧರಿಸಿದ ದೇವತೆಗಳು ಮನ್ಮಥನ (ಕಾಮದೇವರು) ಮೊರೆ ಹೋದರು.

ಲೋಕ ಕಲ್ಯಾಣಕ್ಕಾಗಿ ಮಾಡುತ್ತಿರುವ ಈ ಕಾರ್ಯದಲ್ಲಿ ತನ್ನ ಸಾವು ನಿಶ್ಚಿತ ಎಂಬುದರ ಅರಿವಿದ್ದರೂ ಸಹ ಪರೋಪಕಾರಾರ್ಥವಾಗಿ ಕಾಮನು ತನ್ನ ಹೂ ಬಾಣಗಳಿಂದ ಶಿವನ ತಪಸ್ಸನ್ನು ಭಂಗ ಮಾಡುತ್ತಾನೆ. ತನ್ನ ತಪೋಭಂಗಕ್ಕೆ ಕಾರಣನಾದ ಕಾಮನನ್ನು ಶಿವ ತನ್ನ ಹಣೆಯ ಮಧ್ಯದಲ್ಲಿದ್ದ ಮೂರನೇ ಕಣ್ಣಿನಿಂದ ಸುಟ್ಟು ಭಸ್ಮ ಮಾಡುತ್ತಾನೆ. ಆಗ ಕಾಮನ ಪತ್ನಿ ರತಿದೇವಿಯು ತನ್ನ ಪತಿಯು ಉದ್ದೇಶ ಪೂರ್ವಕವಾಗಿ ಈ ಕಾರ್ಯ ಮಾಡಿಲ್ಲವೆಂದು ದೇವಾನುದೇವತೆಗಳ ಇಚ್ಛೆಯಂತೆ ಈ ರೀತಿಯ ಕಾರ್ಯದಲ್ಲಿ ಭಾಗಿಯಾಗಬೇಕಾದ  ಸಂಗತಿಯನ್ನು ಶಿವನಲ್ಲಿ ತಿಳಿಸಿ ತನಗೆ ಪತಿ ಬಿಕ್ಷೆಯಾಚಿಸಲು, ಕಾಮನು ಅನಂಗನಾಗಿಯೇ ಇರುತ್ತಾನೆ. ಆದರೆ ಪತ್ನಿಗೆ ಮಾತ್ರ ಶರೀರಿಯಾಗಿ ಕಾಣುತ್ತಾನೆ ಎಂದು ಶಿವನು ಅಭಯ ನೀಡಿದನೆಂದು ನಮ್ಮ ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ.

ಲೋಕ ಕಲ್ಯಾಣಕ್ಕಾಗಿ ಮನ್ಮಥನು ಅನಂಗನಾದ (ಕಾಮದೇವ) ಈ ಘಟನೆ ನಡೆದಿದ್ದು ಫಾಲ್ಗುಣಶುದ್ಧ ಪೂರ್ಣಿಮೆಯಂದು. ಆದ್ದರಿಂದ ಈ ದಿನವನ್ನು ಕಾಮನ ಹುಣ್ಣಿಮೆಯಾಗಿ ಆಚರಿಸಲ್ಪಡುತ್ತದೆ. ನಾರದ ಪುರಾಣದಲ್ಲಿ ಬರುವ ಮತ್ತೊಂದು ಕಥೆಯ ಪ್ರಕಾರ, ರಾಕ್ಷಸರ ರಾಜ ಹಿರಣ್ಯಕಷಿಪು ತಾನೇ ದೇವರು, ತನ್ನನ್ನೇ ಎಲ್ಲರೂ ಪೂಜಿಸಬೇಕೆಂದು ತಾಕೀತು ಮಾಡಿದ್ದನ್ನು. ಆತನ ಸ್ವಂತ ಮಗನೇ ಒಪ್ಪದೇ ಹರಿಯೇ ಜಗದೋದ್ಧಾರಕ ಎಂದು ಹೇಳುವುದನ್ನು ಕೇಳಲಾರದೇ ತನ್ನದೇ ಕರುಳ ಕುಡಿ ಪ್ರಹ್ಲಾದನನ್ನು ಕೊಲ್ಲಲು ನಾನಾ ರೀತಿಯಾದ ಪ್ರಯತ್ನ ಪಟ್ಟು ವಿಫಲವಾಗಿ ಕೊನೆಗೆ ಬೆಂಕಿಯಿಂದ ರಕ್ಷಣೆ ನೀಡುವ ವಸ್ತ್ರ ಹೊಂದಿದ್ದ ತನ್ನ ತಂಗಿ ಹೋಳಿಕಾ (ಹೋಲಿಕಾ)ಳ ಮೊರೆ ಹೋಗುತ್ತಾನೆ. ಅಣ್ಣನ ಅನುಜ್ಞೆಯಂತೆ ತನ್ನ ಸೋದರ ಅಳಿಯ ಬಾಲ ಪ್ರಹ್ಲಾದನನ್ನು ಎತ್ತಿಕೊಂಡು ಹೋಳಿಕಾ ಅಗ್ನಿಕುಂಡ ಪ್ರವೇಶಿಸುತ್ತಾಳೆ. ಹಾಗೆ ಪ್ರವೇಶಿಸುವ ಆಕೆಯು ಬೆಂಕಿಯಿಂದ ರಕ್ಷಣೆ ನೀಡುವ ವಸ್ತ್ರವು ಗಾಳಿಯಲ್ಲಿ ಹಾರಿಹೋಗಿ ಹೋಳಿಕಾಳ ದಹನವಾಗುತ್ತಾಳೆ ಮತ್ತು ಪರಮ ವಿಷ್ಣು ಭಕ್ತ ಪ್ರಹ್ಲಾದ ಒಂದು ಚೂರು ಬೆಂಕಿ ತಾಗದೇ ಪಾರಾಗುತ್ತಾನೆ. ಆದ್ದರಿಂದ ಹೋಳಿಕಾ ದಹನವಾದ ದಿನವನ್ನು ಹೋಳಿಹಬ್ಬ ಎಂದು ಆಚರಿಸುವ ಸಂಪ್ರದಾಯ ಅಂದಿನಿಂದ ರೂಢಿಗೆ ಬಂದಿತು. ಎಂಬ ಪ್ರತೀತಿ ಇದೆ.

## ಹಬ್ಬದ ಮಹತ್ವ

- ಮೇಲಿನ ಎರಡೂ ಕಥನಗಳ ಹಿಂದೆ ಇರುವ ಸಂದೇಶ ಒಂದೇ. ಕೆಟ್ಟದನ್ನು ಸುಟ್ಟುಬಿಡುವುದು, ಕಾಮಕ್ರೋಧಾದಿ ಅರಿಷಡ್ವರ್ಗಗಳನ್ನು ಅಗ್ನಿಕುಂಡದಲ್ಲಿ ಸುಟ್ಟು, ಸದಾಚಾರವನ್ನು ರೂಢಿಸಿಕೊಳ್ಳುವುದು, ಅಸುರೀ ಶಕ್ತಿಗಳ ನಿರ್ನಾಮದ ದ್ಯೋತಕವಾಗಿ ಹೋಳಿ ಹಬ್ಬದ ಆಚರಣೆ. ಕೆಟ್ಟ ಕೆಲಸ ಮಾಡುವ ಪ್ರತಿಯೊಬ್ಬರೂ ಅಂತಿಮವಾಗಿ ಸುಟ್ಟು ಭಸ್ಮರಾಗುತ್ತಾರೆ ಎಂಬ ಸುಂದರ ಸಂದೇಶ ನೀಡುವ ಈ ಹೋಳಿ ಹಬ್ಬದ ಆಚರಣೆಯ ಸದುದ್ದೇಶವಾಗಿದೆ.
- ಸಮಾಜದಲ್ಲಿ ಬಣ್ಣ ಹಚ್ಚುವ ಮೂಲಕ ಶ್ರೀಮಂತರು, ಬಡವರು, ಪುರುಷರು, ಮಹಿಳೆಯರು, ಮಕ್ಕಳು ಮತ್ತು ಹಿರಿಯರೆನ್ನುವ ತಾರತಮ್ಯವಿಲ್ಲದೇ ಒಂದುಗೂಡಿಸುವ ಸೌಹಾರ್ದತೆಯ ಭಾವ ಬಲಪಡಿಸುವ ಜೀವನೋತ್ಸಾಹ ನೀಡುವ ಹಬ್ಬವಾಗಿದೆ.
- ನಿಸರ್ಗ ಬದಲಾವಣೆಯ ವಸಂತ ಋತುವಿನ ಸಂದರ್ಭದಲ್ಲಿ ಮನುಷ್ಯನ ಆರೋಗ್ಯಕ್ಕೆ ಅನುಕೂಲವಾಗುವಂತಹ ವಿವಿಧ ಬಣ್ಣಗಳನ್ನು ಹಣ್ಣು, ಕಾಯಿ, ಎಲೆ, ಹೂ ಗಿಡಮೂಲಿಕೆ

ಪುಟ 10 ಕ್ಕೆ ➤

KRMSS

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ), ಬೆಂಗಳೂರು

# KARNATAKA RAJYA MADHYAMIKA SHIKSHAKA SANGH (R)

(Affiliated to Akhil Bhartiya Rashtriya Shaikshik Mahasangh)

ನೊ.ಸಂ: 9-67/68

ABRSM


ಸಂರಕ್ಷಕರು
ವೈ. ನರಹರಿ
Ex.MLC

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ
ಶಿವಾನಂದ ಸಿಂಧನಕೇರಾ
93432 11679

ಕ್ಷೇತ್ರೀಯ ಪ್ರಮುಖ - ABRSM
ಕೆ. ಬಾಲಕೃಷ್ಣ ಭಟ್
Ex.MLC

ರಾಜ್ಯ ಅಧ್ಯಕ್ಷರು
ಸಂದೀಪ ಬೂದಿಹಾಳ
94491 93705

ರಾಜ್ಯ ಕಾರ್ಯಾಧ್ಯಕ್ಷರು
ಅರುಣ ಶಹಾಪೂರ MLC
94484 56474

ರಾಜ್ಯ ಪ್ರಧಾನ ಕಾರ್ಯದರ್ಶಿ
ಚಿದಾನಂದ ಆ. ಪಾಟೀಲ
94491 14285

ವಿಶೇಷ ಆಹ್ವಾನಿತರು - ABRSM
ಹೆಚ್. ನಾಗಭೂಷಣರಾವ್

ರಾಷ್ಟ್ರೀಯ ಸಹ ಕಾರ್ಯದರ್ಶಿ - ABRSM
ಶ್ರೀಮತಿ ಮಮತಾ ಡಿ.ಕೆ.
98865 98436

ರಾಜ್ಯ ಉಪಾಧ್ಯಕ್ಷರು
ಆರ್. ಕೊಟ್ರಪ್ಪ
ಬಿ.ಹೆಚ್. ವರದರಾಜು
ಶ್ರೀಮತಿ ರೋಹಿಣಿ ದೇಶಪಾಂಡೆ
ಎಸ್. ಸಂದೀಪ್

ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ
ಗಂಗಾಧರಾಚಾರಿ ಎ.
94495 12060

ರಾಜ್ಯ ಕಾರ್ಯದರ್ಶಿಗಳು
ಬಿ.ಎಂ.ಎಸ್. ವೃಷಭೇಂದ್ರಸ್ವಾಮಿ
ಗುಂಡಾಚಾರ್
ಬಿ. ವಿಜಯಲಕ್ಷ್ಮೀ
ಆರ್.ಪಿ. ಓಂಗೋಡೆ

ರಾಜ್ಯ ಖಜಾಂಚಿ
ಜೆ.ಎಂ. ಜೋಶಿ
99802 57154

ರಾಜ್ಯ ಕಾರ್ಯಾಲಯ ಪ್ರಮುಖ
ಜಿ.ಎಸ್. ಕೃಷ್ಣಮೂರ್ತಿ

ರಾಜ್ಯ ಮಹಿಳಾ ಪ್ರಮುಖ
ಶ್ರೀಮತಿ ಜಿ.ಎಸ್. ವಾಸುಕಿ
98806 93741

ರಾಜ್ಯ ವಿಶೇಷ ಆಹ್ವಾನಿತರು
ಶ್ರೀಮತಿ ಆರ್. ಸೀತಾಲಕ್ಷ್ಮಿ
ಕ್ಯಾಪ್ಟನ್ ಗಣೇಶ ಕಾರ್ಣಿಕ್ Ex.MLC

ರಾಜ್ಯ ಕಾರ್ಯಕಾರಿಣಿ ಸದಸ್ಯರು
ಹೆಚ್.ಎ. ಸರ್ವೇಶ
ರಾಜಶೇಖರ ಮಂಗಲಗಿ
ಪರಮೇಶ್ವರಪ್ಪ ಓಲೇಕಾರ
ಶ್ರೀಮತಿ ಬಿ.ಹೆಚ್. ಜಕ್ಕಿ
ಶ್ರೀಮತಿ ತ್ರಿವೇಣಿ
ಪ್ರಕಾಶ ರಾಣೆ
ಹೆಚ್.ಪಿ. ಮಹಾಲಿಂಗಯ್ಯ
ಶ್ರೀಮತಿ ಮನೋರಮ


ದಿನಾಂಕ : 31.08.2023

ಗೆ,

ಮಾನ್ಯ ಅಧ್ಯಕ್ಷರು
ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ,
ಮಲ್ಲೇಶ್ವರಂ,
ಬೆಂಗಳೂರು.

ಮಾನ್ಯರೆ,

ವಿಷಯ: ಎಸ್.ಎಸ್.ಎಲ್.ಸಿ ಪರೀಕ್ಷಾ ಕಾರ್ಯದಲ್ಲಿ ಪ್ರೌಢಶಾಲಾ ಶಿಕ್ಷಕರನ್ನು ಕೈಬಿಡುತ್ತಿರುವ ಬಗ್ಗೆ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 1967ರಿಂದ ಕರ್ನಾಟಕದಲ್ಲಿ ಶಿಕ್ಷಕರ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಕಾರ್ಯ ಮಾಡುತ್ತಾ ಬಂದಿದೆ. ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಉತ್ತಮ ಪಡಿಸುವ ದೃಷ್ಟಿಯಿಂದ ಈ ಕೆಳಗಿನ ಚಟುವಟಿಕೆಗಳನ್ನು ಅನೇಕ ವರ್ಷಗಳಿಂದ ಮಾಡುತ್ತಾ ಬಂದಿದೆ.

- ಬೆಂಗಳೂರು ನಗರದ ಕೊಳಗೇರಿಯಲ್ಲಿನ ವಿದ್ಯಾರ್ಥಿಗಳಿಗೆ ಉಚಿತವಾಗಿ ತರಗತಿಗಳನ್ನು ನಡೆಸಿರುವುದು.
- ಎಫ್.ಎಂ ರೇಡಿಯೋದಲ್ಲಿ ನುರಿತ ಶಿಕ್ಷಕರಿಂದ ಪಾಠಗಳನ್ನು ಮಾಡಿಸಲಾಗಿದೆ.
- ಶಿಕ್ಷಕರಿಗೆ ನುರಿತ ತಜ್ಞರಿಂದ ತರಬೇತಿಗಳನ್ನು ಕೊಡಿಸಿರುವುದು.
- ಕಳೆದ ಆರು ವರ್ಷಗಳಿಂದ ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಫೋನ್ ಇನ್ ಕಾರ್ಯಕ್ರಮ ಮಾಡುತ್ತಾ ಬಂದಿದ್ದು, ಈ ಕಾರ್ಯಕ್ರಮ ವಿದ್ಯಾರ್ಥಿಗಳಿಂದ, ಪಾಲಕರಿಂದ ಮತ್ತು ಶಿಕ್ಷಣ ಇಲಾಖೆಯ ಮೆಚ್ಚುಗೆ ಪಡೆದಿದೆ ಹಾಗೂ ಈ ಕಾರ್ಯಕ್ರಮ ಪರೀಕ್ಷಾ ಫಲಿತಾಂಶದ ಮೇಲೆ ಧನಾತ್ಮಕ ಪರಿಣಾಮ ಬೀರಿದೆ.

ಈ ವರ್ಷ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ಪರೀಕ್ಷಾ ಪದ್ಧತಿಯಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಯತ್ನಿಸುತ್ತಿರುವುದು ಸ್ವಾಗತಾರ್ಹವಾದದ್ದು. ಪರೀಕ್ಷಾ ಸುಧಾರಣೆಯ ನಿಟ್ಟಿನಲ್ಲಿ ಮಂಡಳಿ ತೆಗೆದುಕೊಳ್ಳುವ ಎಲ್ಲಾ ಧನಾತ್ಮಕ ನಿರ್ಣಯಗಳನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಬೆಂಬಲಿಸುತ್ತದೆ. ಆದರೆ ಎಸ್.ಎಸ್.ಎಲ್.ಸಿ ಪರೀಕ್ಷಾ ಕಾರ್ಯದಲ್ಲಿ ಪ್ರೌಢಶಾಲಾ ಶಿಕ್ಷಕರನ್ನು ದೂರಗಿಡುವ ಬಗ್ಗೆ ಮಂಡಳಿ ಯೋಚಿಸುತ್ತಿರುವುದು ಈ ಕೆಳಗಿನ ಕಾರಣಗಳಿಂದ ಸರಿಯಾದ ಕ್ರಮವಲ್ಲ.

- ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದ ಹಂತದವರೆಗೆ ನಡೆಯುವ ಪರೀಕ್ಷೆಗಳಿಗೆ ಆಯಾ ಹಂತದ ಶಿಕ್ಷಕರೇ ಪರೀಕ್ಷೆ ನಡೆಸುತ್ತಾರೆ.
- ಈ ಕ್ರಮದಿಂದ ಪ್ರೌಢಶಾಲಾ ಶಿಕ್ಷಕರ ಆತ್ಮಸ್ಥೈರ್ಯ ಕುಂದುತ್ತದೆ.

2/1

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ,**
**ಬೆಂಗಳೂರು – 560 003**

ಸಂಖ್ಯೆ: ಸಿ1.SSLC/ಪ.ಕೇಂ.ದ/25/2023–24 ದಿನಾಂಕ:13–03–2024

**ಸುತ್ತೋಲೆ**

ವಿಷಯ: 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ–1ಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಕೇಂದ್ರಗಳ ಕೊಠಡಿ ಮೇಲ್ವಿಚಾರಕರಾಗಿ ಪ್ರೌಢಶಾಲಾ ಶಿಕ್ಷಕರನ್ನು ನೇಮಿಸಿಕೊಳ್ಳುವುದು ಮತ್ತು ಆಯಾ ತಾಲ್ಲೂಕು ಹಂತದಲ್ಲಿ ತರಬೇತಿ ನೀಡುವ ಬಗ್ಗೆ.

ಉಲ್ಲೇಖ: 1. ಮಂಡಲಿ ಸುತ್ತೋಲೆ ಸಂಖ್ಯೆ:ಸಿ1/ಎಸ್.ಎಸ್.ಎಲ್.ಸಿ/ಪ–1.ಸುತ್ತೋಲೆ–93/2023–24 ದಿ:04–03–2024

2. ದಿನಾಂಕ:12–03–2024 ರಂದು ಮಂಡಲಿಯಲ್ಲಿ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಚರ್ಚಿಸಿದಂತೆ.

*****

2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ–1ರ ಪರೀಕ್ಷಾ ಕೇಂದ್ರಗಳಿಗೆ ಕೊಠಡಿ ಮೇಲ್ವಿಚಾರಕರಾಗಿ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವಂತೆ ಉಲ್ಲೇಖ–1 ರ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಪರೀಕ್ಷಾ ಕೇಂದ್ರಗಳಿಗೆ ಕೊಠಡಿ ಮೇಲ್ವಿಚಾರಕರಾಗಿ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಪತ್ರವನ್ನು ಮಂಡಲಿಯಿಂದ ಹಿಂಪಡೆಯಲಾಗಿದೆ. ಹಾಗಾಗಿ ಕಳೆದ ಸಾಲಿನಲ್ಲಿದ್ದಂತೆ ಎಸ್.ಎಸ್.ಎಲ್.ಸಿ ಪರೀಕ್ಷಾ ಕಾರ್ಯಗಳಿಗೆ ಪ್ರೌಢ ಶಾಲೆಯ ಸಹಶಿಕ್ಷಕರನ್ನು ನಿಯೋಜಿಸಿಕೊಳ್ಳಲು ಅನುಮತಿಸಿದೆ.

ಪ್ರೌಢಶಾಲೆಯ ಸಹಶಿಕ್ಷಕರನ್ನು ಕೊಠಡಿ ಮೇಲ್ವಿಚಾರಕರಾಗಿ ಹಾಗೂ ಪರೀಕ್ಷೆಯ ಇತರೆ ಕಾರ್ಯಗಳಿಗೆ ನಿಯೋಜಿಸಿಕೊಳ್ಳುವಾಗ ಪರೀಕ್ಷಾ ಕೇಂದ್ರವಿರುವ ಕ್ಲಸ್ಟರ್‌ನ್ನು ಹೊರತುಪಡಿಸಿ ಪರೀಕ್ಷಾ ಕೇಂದ್ರಕ್ಕೆ ಹತ್ತಿರವಿರುವ ಬೇರೆ ಕ್ಲಸ್ಟರ್‌ನಿಂದ ಶಿಕ್ಷಕರನ್ನು ನೇಮಿಸಿಕೊಳ್ಳುವುದು. ಸರ್ಕಾರಿ/ಅನುದಾನಿತ ಪ್ರೌಢಶಾಲಾ ಶಿಕ್ಷಕರು ಕೊರತೆಯಿದ್ದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಕೊಠಡಿ ಮೇಲ್ವಿಚಾರಕರಾಗಿ ನೇಮಿಸಿಕೊಳ್ಳುವಂತೆ ತಿಳಿಸಿದೆ. ಹಾಗೆಯೇ ಪರೀಕ್ಷೆಯಿರುವ ವಿಷಯದ ದಿನದಂದು ಸದರಿ ವಿಷಯದ ಶಿಕ್ಷಕರನ್ನು ಕೊಠಡಿ ಮೇಲ್ವಿಚಾರಕರನ್ನಾಗಿ ನೇಮಕ ಮಾಡಬಾರದು ಹಾಗೂ ಟಿ.ಜಿ.ಟಿ ಶಿಕ್ಷಕರನ್ನು ಗಣಿತ ಮತ್ತು ವಿಜ್ಞಾನ ವಿಷಯದ ಪರೀಕ್ಷೆ ನಡೆಯುವ ದಿನಗಳಂದು ಕೊಠಡಿ ಮೇಲ್ವಿಚಾರಕರನ್ನಾಗಿ ನೇಮಕ ಮಾಡಬಾರದು.

ಉಲ್ಲೇಖ–2ರ ವಿಡಿಯೋ ಕಾನ್ಫರೆನ್ಸ್‌ನಲಿ ಆಯ್ದ ಮುಖ್ಯ ಅಧೀಕ್ಷಕರು ಮತ್ತು ತಾಲ್ಲೂಕು ನೋಡಲ್ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದ್ದು, ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳು ಆಯಾ ತಾಲ್ಲೂಕು ಹಂತದಲ್ಲಿ **ದಿನಾಂಕ:15–03–2024 ರಿಂದ ದಿನಾಂಕ:20–03–2024 ರೊಳಗಾಗಿ** ಕೊಠಡಿ ಮೇಲ್ವಿಚಾರಕರಿಗೆ ತರಬೇತಿ ನೀಡಲು ತಿಳಿಸಿದೆ.

ಉಳಿದಂತೆ ಉಲ್ಲೇಖ–1ರ ಸುತ್ತೋಲೆಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಅನುಪಾಲನೆ ಮಾಡಿ ಪರೀಕ್ಷಾ ಪ್ರಕ್ರಿಯೆಗಳಲ್ಲಿ ಯಾವುದೇ ಲೋಪದೋಷಗಳು ಉಂಟಾಗದಂತೆ ವ್ಯವಸ್ಥಿತವಾಗಿ ಹಾಗೂ ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಈ ಮೂಲಕ ಸೂಚಿಸಿದೆ.

(ಎಸ್.ಮಂಜುಶ್ರೀ, ಭಾ.ಆ.ಸೇ.)
ಅಧ್ಯಕ್ಷರು

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ ರವರಿಗೆ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಅಭಿವೃದ್ಧಿ), ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ, ಶಾಲಾ ಶಿಕ್ಷಣ ಇಲಾಖೆ ರವರಿಗೆ.
3. ರಾಜ್ಯದ ಎಲ್ಲಾ ಜಿಲ್ಲಾ ಎಸ್.ಎಸ್.ಎಲ್.ಸಿ. ನೋಡಲ್ ಅಧಿಕಾರಿಗಳು, ಜಿಲ್ಲಾ ಉಪನಿರ್ದೇಶಕರ ಕಛೇರಿ ರವರಿಗೆ
4. ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸುತ್ತಾ, ನಿಮ್ಮ ವಲಯದ ವ್ಯಾಪ್ತಿಯಲ್ಲಿ ಬರುವ ಶಾಲಾ ಮುಖ್ಯಸ್ಥರಿಗೆ ಈ ಸುತ್ತೋಲೆಯ ಅಂಶಗಳನ್ನು ವಿವರಿಸಿ ಅದರಂತೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಿದೆ.
5. ರಾಜ್ಯದ ಎಲ್ಲಾ ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳಿಗೆ.

c:\2023-24 Exam\C1 LETTERS.docx

# ಅನುಕರಣೀಯ ಕಲಿಕೆ



**ಅನಿಲ ಚಿತ್ರಗಾರ**
**ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು,**
**ಚಿಕ್ಕಬಳ್ಳಾಪುರ**

ಸಾಮಾನ್ಯವಾಗಿ ಜೀವ ಸಂಕುಲಗಳೆಲ್ಲ ಒಂದನ್ನೊಂದು ನೋಡಿ ಕಲಿತು ಜೀವನದಲ್ಲಿ ತನ್ನದೇ ಆದ ಪ್ರಭಾವವನ್ನು ಹೊಂದಲು ಪ್ರಯತ್ನಿಸುತ್ತವೆ. ಅದೇ ರೀತಿ ಮನುಷ್ಯ ಜೀವಿಯೂ ಸಹ 'ಅನುಕರಣೆ'ಯ ಪ್ರಥಮ ಪಾಠದಿಂದಲೇ ತನ್ನ ಜೀವನದ ಪ್ರಾರಂಭಿಕ ಹಂತವನ್ನು ಪ್ರಾರಂಭಿಸುತ್ತಾನೆ. ಅದೇ ರೀತಿ ಮಗುವೂ ಸಹ ತನ್ನ ಪ್ರಥಮ ಕಲಿಕೆಯನ್ನು ತಾಯಿಯ ಅನುಕರಣೆ ಮೂಲಕ ಕಲಿಯುತ್ತದೆ.

ಮಕ್ಕಳ ಮನಸ್ಸು ಪರಿಶುದ್ಧ, ನಿರ್ಮಲ ತಿಳಿ ನೀರಿನಂತೆ. ಅದರಲ್ಲಿ ಕಲ್ಮಶವೆಂಬುದಿರುವುದಿಲ್ಲ. ಶಿಕ್ಷಕರನ್ನು ದೇವರೆಂದು ಹಾಗೂ ಅವರ ನುಡಿಗಳನ್ನೇ ವೇದವಾಕ್ಯವೆಂದು ನಂಬಿ ಆರಾಧಿಸುವ ಭಕ್ತರಾಗಿರುತ್ತಾರೆ, ಇದು ಅನುಕರಣೆಯ ಪ್ರಥಮ ಹಂತ.

ಅನುಕರಣೆ ಎಂಬುದು ಅದ್ಭುತ ಶಕ್ತಿ. ತಾಯಿಯಿಂದ ಮಗುವಿಗೆ – ಶಿಕ್ಷಕರಿಂದ ಮಕ್ಕಳಿಗೆ– ನಾಯಕನಿಂದ ಸಮಾಜದ ಜನರಿಗೆ. ಹೀಗೆ ಅದು ಮುಂದುವರೆಯುತ್ತಾ ಹೋಗುತ್ತದೆ. ಯುವ ಸಮೂಹ ಈ ಅನುಕರಣೆಯ ಪ್ರಥಮ ಸ್ಥಾನದಲ್ಲಿ ಬಂದು ನಿಲ್ಲುತ್ತಾರೆ. ಈ ಯುವಕರು ಸಮಾಜದ ಉತ್ತಮ ನಿರ್ಮಾತೃಗಳಾಗಿ ಹೊರಹೊಮ್ಮುವವರಾಗಿರುತ್ತಾರೆ. ಉತ್ತಮ ಸಮಾಜದ ಅಡಿಪಾಯ ಹಾಕುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಅವರು ಯಾವ ವ್ಯಕ್ತಿಯನ್ನು ನಾಯಕನೆಂದು ತಿಳಿದಿರುತ್ತಾನೋ ಆ ವ್ಯಕ್ತಿಯ ಹಾವ– ಭಾವಗಳನ್ನು ತನ್ನ ಜೀವನದ ಪ್ರತಿದಿನದ ಭಾಗವನ್ನಾಗಿಸುತ್ತಾರೆ.

ಹಾಗಾದರೆ ನಾವೆಲ್ಲ ಯಾವ ವ್ಯಕ್ತಿಯನ್ನು ಅನುಕರಣೆ ಮಾಡಬೇಕು ಎಂಬುದು ದೊಡ್ಡ ಪ್ರಶ್ನೆ. ಅನುಕರಣೆಯೆಂಬುದು ವ್ಯಕ್ತಿಗತ ಅಂಶ. ಅದನ್ನು ಬುದ್ಧಿಮಾತು ಹೇಳುವುದರ ಮೂಲಕ ತಿದ್ದಲು ಆಗುವುದಿಲ್ಲ. ಅದನ್ನು ಆದರ್ಶತನದ ದಾರಿಯ ಮೂಲಕ ತಿಳಿಸಬೇಕಾಗುತ್ತದೆ. ಹಿರಿಯರು ಮಾತನಾಡುವ ಶೈಲಿ, ಅವರ ಉಡುಗೆ – ತೊಡುಗೆ, ಅವರು ಇತರರೊಂದಿಗೆ ಬೆರೆಯುವ ರೀತಿಯನ್ನು ಯುವಕರು ಹಾಗೂ ಚಿಕ್ಕ ಮಕ್ಕಳು ಕಲಿಯುತ್ತಾರೆ.

ಉದಾಹರಣೆಗೆ ಡಾ॥ ಎಪಿಜೆ ಅಬ್ದುಲ್ ಕಲಾಂ, ಶ್ರೀಮತಿ ಸುಧಾಮೂರ್ತಿ, ಭಾರತ ರತ್ನ ದಿ. ಅಟಲ್ ಬಿಹಾರಿ ವಾಜಪೇಯಿ, ಮದನ್ ಮೋಹನ್ ಮಾಳವೀಯ ಮುಂತಾದ ಮಹಾನ್ ವ್ಯಕ್ತಿಗಳ ಆದರ್ಶತನ ಉತ್ತಮ ಸಮಾಜ ನಿರ್ಮಾಣಕ್ಕೆ ಅನುಕರಣೆಯ ಅಡಿಪಾಯವನ್ನು ಹಾಕುತ್ತವೆ. ಅದೇ ರೀತಿ ಸಮಾಜಘಾತುಕ ಶಕ್ತಿಗಳು ಯುವ ಸಮುದಾಯದ ಹಾದಿ ತಪ್ಪಿಸಲು ಹಾತೊರೆಯುತ್ತಿರುತ್ತವೆ. ಅದೂ ಸಹ ಅಂಧಾನುಕರಣೆಯ ವಿಷಬೀಜ ಬಿತ್ತಿ ಯುವ ಸಮುದಾಯವನ್ನು ದಾರಿ ತಪ್ಪಿಸುವಂತಹ ನಿರಂತರ ಕೆಲಸಕ್ಕೆ ಹಾತೊರೆಯುತ್ತಿರುತ್ತವೆ.

ಅಕ್ಷರಶಃ ಸಮುದಾಯದ ಹಿರಿಯರು, ಶಿಕ್ಷಕರು, ತಂದೆ ತಾಯಿ, ಅಣ್ಣಂದಿರು, ಅಕ್ಕಂದಿರು ತಮ್ಮ ಕೆಳಹಂತದ ಸಮುದಾಯಕ್ಕೆ ಮಾದರಿಯಾದಂತಹ ಜೀವನ ಶೈಲಿಯನ್ನು ನಿರ್ಮಿಸಿಕೊಡಬೇಕು.

ಯುವಶಕ್ತಿ ನಿರ್ಮಿಸುವಂತಹ ಹಾಗೂ ರಾಷ್ಟ್ರ ಪ್ರಬಲವಾಗಲು ಬೇಕಾಗುವಂತಹ 'ಅನುಕರಣೆ' ಅಂಶಗಳು ಯುವಕರ ಮುಂದೆ ತರಬೇಕು. ಆ ಯುವಶಕ್ತಿ ತನ್ನ ಸಾಮರ್ಥ್ಯವೃದ್ಧಿ ಬೆಳೆಸಿಕೊಂಡು ಹೋಗುವಂತಾದಾಗ 'ನವಚೈತನ್ಯ' ಬೆಳೆಯುತ್ತದೆ. 'ಅನುಕರಣೆ'ಯು ವ್ಯಕ್ತಿಯ ಜೀವನ ಸಾಮರ್ಥ್ಯ ದರ್ಶನಕ್ಕೆ ಅವಕಾಶ ಮಾಡಿಕೊಡಬೇಕು. ಆದರೆ 'ಅಂಧಾನುಕರಣೆ' ವ್ಯಕ್ತಿಯ ಜೀವನ ನಾಶಕ್ಕೆ ಕಾರಣವಾಗುತ್ತದೆ. ಹಾಗಾಗಿ ಯಾವುದು ಸೂಕ್ತ ಎಂಬುದನ್ನು ಸ್ವ– ಸಾಮರ್ಥ್ಯದಿಂದ ಆಯ್ಕೆ ಮಾಡಿಕೊಳ್ಳಲು ಯುವ ಸಮುದಾಯ ಮುಂದಾಗಬೇಕು. ಅನುಕರಣೆ ಮಾರಕವಾಗದೇ ಮಾರ್ಗದರ್ಶನವಾಗಿರಬೇಕು. ●

## ಓದುಗರ ಸ್ಪಂದನೆ

**ಶಿಕ್ಷಕ ಸಮಾಚಾರ ಪತ್ರಿಕೆ ಚೆನ್ನಾಗಿ ಮೂಡಿಬರುತ್ತಿದೆ. ಬಹಳ ಉಪಯುಕ್ತ ಲೇಖನಗಳನ್ನು ಬರೆಯುತ್ತಿದ್ದಾರೆ. ಅಭಿನಂದನೆಗಳು. ಪರೀಕ್ಷಾ ತಯಾರಿಯ ಬಗ್ಗೆ ವಿದ್ಯಾರ್ಥಿಗಳಿಗೆ ಒಂದು ಒಳ್ಳೆಯ ಮಾರ್ಗದರ್ಶನ, ದಾರಿದೀಪದಂತಿದೆ. ಸಾಧಿಸಲು ಛಲವುಳ್ಳ ಮಕ್ಕಳಿಗೆ ಉತ್ತಮ ಸಲಹೆ ನೀಡಿದ್ದೀರಿ, ಧನ್ಯವಾದಗಳು**

**– ಶ್ರೀ ಧನಸಿಂಗ ರಾಥೋಡ, ಶಿಕ್ಷಕರು, ಜೇವರ್ಗಿ**

**ಫೆಬ್ರವರಿ 2024ರ ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರದ ಸಂಪಾದಕೀಯದಲ್ಲಿ ಸಂಪಾದಕರು ಪರೀಕ್ಷೆಯ ಭಯ ಹೋಗಲಾಡಿಸುವ ಕುರಿತು ಮಕ್ಕಳು, ಶಿಕ್ಷಕರು, ಪಾಲಕರು ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಪರಿಹಾರೋಪಾಯದ ಬಗ್ಗೆ ಒಳ್ಳೆಯ ಮಾರ್ಗದರ್ಶನವನ್ನು ನೀಡಿ ಉಪಕೃತ್ಯರಾಗಿದ್ದಾರೆ. ಈ ಸಂಚಿಕೆಯಲ್ಲಿನ ಎಲ್ಲ ಲೇಖನಗಳು ಸಂಧರ್ಭೋಚಿತವಾಗಿದೆ. ಧನ್ಯವಾದಗಳು.**

**ಪರೀಕ್ಷಾ ತಯಾರಿಕೆಯಲ್ಲಿ ವಿದ್ಯಾರ್ಥಿ, ಶಿಕ್ಷಕ ಪಾಲಕ "ಲೇಖನವನ್ನು ಶ್ರೀ ಚಿದಾನಂದ ಪಾಟೀಲ್ ಅವರು ಸಲಹೆ ಚೆನ್ನಾಗಿ ನೀಡಿದ್ದಾರೆ. "ರಾಮ ಮಂದಿರ ನಿರ್ಮಾಣದಿಂದ ಅಖಂಡ ಹಿಂದೂ ಸಾಮ್ರಾಜ್ಯ ಸ್ಥಾಪನೆ" ಕುರಿತಾಗಿ ನಂ ನಾಗಲಕ್ಷ್ಮಿಯವರ ಲೇಖನವು ಮನಮುಟ್ಟುವಂತಿತ್ತು. "ಕಾದಿದ್ದಳು ಶಬರಿ ಶ್ರೀರಾಮನ ಮಂತ್ರಾಕ್ಷತೆಗಾಗಿ" ವಿಷಯವಾಗಿ ಬರೆದ ಲೇಖಕಿ ಆರ್. ಸೀತಾಲಕ್ಷ್ಮಿ ಅವರು ಮಂತ್ರಾಕ್ಷತೆಯನ್ನು ಮನೆ ಮನೆಗೆ ತಲುಪಿಸುವಾಗಿನ ಅನುಭವವನ್ನು ಓದಿದಾಗ ಹೃದಯವು ತುಂಬಿ ಬಂದಿತು. ಈ ಸಂಚಿಕೆಯಲ್ಲಿನ ಎಲ್ಲ ಲೇಖನಗಳು ಸಂದರ್ಭೋಚಿತವಾಗಿವೆ. ಧನ್ಯವಾದಗಳು**

**– ವಿ. ಎನ್. ಗೋಡಖಿಂಡಿ, ನಿವೃತ್ತ ಪ್ರಾಂಶುಪಾಲರು, ರಾಮದುರ್ಗ** ●

➢ ಪುಟ 4 ರಿಂದ.....

ಹೀಗೆ ಹಲವಾರು ವಿನೂತನ ಕ್ರಾಂತಿಕಾರಿ ಯೋಜನೆಗಳ ಮೂಲಕ ಸಮಾಜದ ಪುರೋಭಿವೃದ್ಧಿ ನಡೆಯುತ್ತಿರುವುದು 'ಅಮೃತಕಾಲದ' ಭಾರತಕ್ಕೆ ಅನಿವಾರ್ಯ ಎಂಬುದನ್ನು ನಾವು ಮನಗಾಣಬೇಕಾಗಿದೆ. ಈ ಹಿನ್ನೆಲೆಯಲ್ಲಿ ಈ ರಾಷ್ಟ್ರದ ಜವಾಬ್ದಾರಿಯುತ ನಾಗರೀಕರಾದ ನಾವು 2024 ಏಪ್ರಿಲ್–26 ರಂದು ನಡೆಯುವ 2ನೇ ಹಂತದ ಲೋಕಸಭಾ ಚುನಾವಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಮ್ಮಗಳ ಜವಾಬ್ದಾರಿಯನ್ನು ನಿಭಾಯಿಸಬೇಕಾಗಿದೆ.

ಇಡೀ ರಾಷ್ಟ್ರದಲ್ಲಿ 97 ಕೋಟಿ ಮತದಾರರಿದ್ದಾರೆ. ಅದರಲ್ಲಿ 47.15 ಕೋಟಿ ಮಹಿಳಾ ಮತದಾರರು ಮತ್ತು 49.72 ಕೋಟಿ ಪುರುಷ ಮತದಾರರಿದ್ದಾರೆ. 1.98 ಕೋಟಿ ಮತದಾರರು 80 ವರ್ಷ ಮೇಲ್ಪಟ್ಟವರು ಆಗಿದ್ದಾರೆ. ಪ್ರತಿ 1000 ಪುರುಷ ಮತದಾರರಿಗೆ 948 ಮಹಿಳಾ ಮತದಾರರಿದ್ದಾರೆ. ಒಟ್ಟು 543 ಕ್ಷೇತ್ರಗಳಿಗೆ ಭಾರತದಾದ್ಯಂತ 7 ಹಂತಗಳಲ್ಲಿ ಚುನಾವಣೆ ನಡೆಯಲಿದ್ದು ಮೊದಲ ಹಂತ ಏಪ್ರಿಲ್ 19 ರಿಂದ ಹಾಗೂ 2ನೇ ಹಂತ ಏಪ್ರಿಲ್ 26ರಿಂದ ಪ್ರಾರಂಭವಾಗುತ್ತದೆ. ಮೊಟ್ಟಮೊದಲ ಬಾರಿಗೆ ವಿಶೇಷ ಚೇತನ ಹಾಗೂ 85 ವರ್ಷ ಮೇಲ್ಪಟ್ಟವರು ಮನೆಯಿಂದಲೇ ಮತ ಚಲಾಯಿಸುವ ಅವಕಾಶ ಕಲ್ಪಿಸಲಾಗಿದೆ.

1.84 ಕೋಟಿ ಮೊದಲ ಬಾರಿ ಹಕ್ಕು ಚಲಾಯಿಸುವ ಯುವ ಮತದಾರರು ಮತ್ತು 88 ಲಕ್ಷ ವಿಶೇಷ ಚೇತನ ಮತದಾರರು ಚುನಾವಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಚುನಾವಣೆಗೆ 4 ಲಕ್ಷ ವಾಹನಗಳ ಬಳಕೆ ಮಾಡಲಾಗುತ್ತದೆ. ಈ ರಾಷ್ಟ್ರದ ಜವಾಬ್ದಾರಿ ಪೌರನಾಗಿ ನಾನು ಯಾವುದೇ ಆಮಿಷಗಳಿಗೆ ಒಳಗಾಗುವುದಿಲ್ಲ. ನನ್ನ ವೋಟನ್ನು ಹಣಕ್ಕೆ ಮಾರಿಕೊಳ್ಳುವುದಿಲ್ಲ, ಸ್ವಇಚ್ಛೆಯಿಂದ ಮತದಾನದಲ್ಲಿ ಪಾಲ್ಗೊಳ್ಳುವುದು ನನ್ನ ಹಕ್ಕು ಎಂದು ತಿಳಿದು ರಾಷ್ಟ್ರದ ಹಿತದೃಷ್ಟಿಯಿಂದ, ಭದ್ರತೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಉತ್ತಮ ಜನಪ್ರತಿನಿಧಿಯನ್ನು ಆಯ್ಕೆ ಮಾಡುತ್ತೇನೆ ಎಂಬ ಸಂಕಲ್ಪದೊಂದಿಗೆ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸುತ್ತೇವೆ. ಈ ನಮ್ಮ ಸಂಕಲ್ಪದ ಫಲವಾಗಿ ಕೇಂದ್ರದಲ್ಲಿ ಸುಭದ್ರ, ಸಮರ್ಥ ಹಾಗೂ ಜನಸ್ನೇಹಿ ಸರ್ಕಾರವನ್ನು ತರುವುದರ ಮೂಲಕ ಭವ್ಯ ಭಾರತದ ನಿರ್ಮಾಣಕ್ಕೆ ಸಹಕರಿಸೋಣ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಭಾರತದ ವಿಕಸನಕ್ಕೆ ನೆರವಾಗೋಣ. ●

**ದಾನಗಳಲ್ಲಿ ಪ್ರಧಾನವಾದ ದಾನಗಳೆಂದರೆ ನೇತ್ರದಾನ ಹಾಗೂ ಮತದಾನ. ನೇತ್ರದಾನವನ್ನು ನಾವು ಬದುಕಿಲ್ಲದಿರುವಾಗ ಬೇರೆಯವರ ಒಳಿತಿಗಾಗಿ ಮಾಡುವ ದಾನ. ಮತದಾನವೆಂದರೆ ನಮ್ಮ ಒಳಿತಿಗಾಗಿ ಮಾಡುವ ದಾನ. ದಾನವೆಂದರೆ ಯಾವುದೇ ಸ್ವಾರ್ಥವನ್ನು ಬಯಸದೇ, ಸ್ವಂತದ್ದನ್ನು ಇನ್ನೊಬ್ಬರಿಗೆ ನೀಡುವುದು. ಆದ್ದರಿಂದ ಈ ಬಾರಿ ಚುನಾವಣಾ ಸಮಯದಲ್ಲಿ ಮತದಾನ ಮಾಡುವಾಗ ನಮ್ಮ ಒಳಿತಿಗಾಗಿ ಒಳ್ಳೆಯ ವ್ಯಕ್ತಿಯನ್ನು ಆಯ್ಕೆ ಮಾಡಿ, ಯಾವುದೇ ಆಸೆ, ಆಮಿಷಗಳಿಗೆ ಬಲಿಯಾಗಿ "ದಾನ"ದ ಅರ್ಥಕ್ಕೆ ಅನರ್ಥ ಉಂಟು ಮಾಡಬೇಡಿ. ಯಾವುದೇ ಆಸೆ, ಆಮಿಷಗಳಿಗೆ ಬಲಿಯಾದರೆ ಆಯ್ಕೆಯ ಸ್ವಾತಂತ್ರ್ಯವನ್ನೇ ಕಳೆದು ಕೊಳ್ಳಬೇಕಾಗುತ್ತದೆ. ಯೋಚಿಸಿ, ಯೋಚಿಸಿ, ಚುನಾಯಿಸಿ.**

➢ ಪುಟ 5 ರಿಂದ.....

ನೀಡಿದ ನೀತಿಯ ಉಪದೇಶ, ಭಕ್ತಿಯಮಾರ್ಗದಲ್ಲಿ ನಡೆಯಲು ಆಕೆ ತೋರಿದ ದಾರಿ, ಆಕೆಯ ವೈರಾಗ್ಯದ ವ್ಯಕ್ತಿತ್ವ ಎಂದಿಗೂ ಬೋಧಪ್ರದವಾದುದಲ್ಲವೆ? ಇದು ಒಂದು ಉದಾಹರಣೆ. ಹೀಗೆ ಸ್ಮರಣೀಯರಾದ ಮಹಿಳೆಯರ ಸಾಲಿನಲ್ಲಿ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮಿಂಚಿದವರದೆಷ್ಟೋ. ಝಾನ್ಸಿರಾಣಿಲಕ್ಷ್ಮೀಬಾಯಿ, ಸರೋಜಿನಿ ನಾಯಿಡು, ಮೇಡಂ ಭಿಕಾಜಿಕಾಮಾ, ಅರುಣಾ ಅಸಫ್ ಅಲಿ, ಬೇಗಂ ಹಜರತ್ ಮಹಲ್, ವಿಜಯಲಕ್ಷ್ಮಿ ಪಂಡಿತ್, ಕಸ್ತೂರಬಾ ಗಾಂಧಿ, ಕೆಳದಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಬೆಳವಡಿ ಮಲ್ಲಮ್ಮ, ರಾಣಿಚೆನ್ನಭೈರಾದೇವಿ, ಕಿತ್ತೂರು ರಾಣಿಚೆನ್ನಮ್ಮ, ಒಬ್ಬರೇ? ಇಬ್ಬರೇ? ಕ್ಷಾತ್ರತೇಜದೊಂದಿಗೆ ಇವರೆಲ್ಲ ವಿಜೃಂಭಿಸಿದ ಪರಿ, ಇವರ ದೇಶ ಭಕ್ತಿ ಎಲ್ಲವೂ ಸರ್ವಕಾಲಕ್ಕೂ ಅನುಕರಣೀಯ ಮತ್ತು ಸ್ಫೂರ್ತಿದಾಯಕ. ಇಷ್ಟೇ ಅಲ್ಲ, ನಮ್ಮ ಗ್ರಾಮೀಣ ಮಹಿಳೆಯರ ಶೌರ್ಯ, ತ್ಯಾಗ, ಬಲಿದಾನಗಳೂ ಸಹ ಯಾವ ರೀತಿಯಲ್ಲಿಯೂ ಕಡಿಮೆಯದಲ್ಲ.

ಇನ್ನು ಸಾಮಾಜಿಕವಾಗಿ, ಸಾಹಿತ್ಯಿಕವಾಗಿ ತಮ್ಮ ಅನನ್ಯ ಕೊಡುಗೆಯನ್ನು ನೀಡಿರುವ ಮಹಿಳೆಯರ ಸಂಖ್ಯೆಯೂ ಬಹು ದೊಡ್ಡದೇ ಇದೆ. ಕಾಲಾಂತರದಲ್ಲಿ ಹಿಂದುಳಿಯಬೇಕಾದ ಮಹಿಳೆಯ ಸ್ಥಿತಿಯಲ್ಲಿ ಸುಧಾರಣೆ ತರಲು ಮೊದಲಿಗೆ ಆಕೆಗೆ ಶಿಕ್ಷಣದ ಅಗತ್ಯವಿದೆಯೆಂದು ಗುರುತಿಸಿ ಅದಕ್ಕೆ ತಕ್ಕ ಸೌಲಭ್ಯಗಳನ್ನು ಒದಗಿಸುವ ಕಾರ್ಯ ಆರಂಭವಾಯಿತು. ಅದಕ್ಕಾಗಿ ಹಲವಾರು ಮಹಿಳೆಯರು, ಸಮಾಜದಲ್ಲಿ ಗಣ್ಯರೆನಿಸಿಕೊಂಡ ಕುಟುಂಬದಿಂದ ಬಂದಿದ್ದವರು ಮಹಿಳಾಕಲ್ಯಾಣದ ಕಾಳಜಿ ಹೊತ್ತು ಬೇಕಾದ ನೆರವನ್ನು ನೀಡಿದರು. ಸಂಪ್ರದಾಯಗಳ ಸಂಕೋಲೆಯಲ್ಲಿ ಬಂಧಿತಳಾಗಿದ್ದ ಮಹಿಳೆಯನ್ನು ಅದರಿಂದ ಮುಕ್ತಗೊಳಿಸುವ ರಚನಾತ್ಮಕ ಯೋಜನೆಗಳಲ್ಲಿ ಅವರೆಲ್ಲರೂ ಶ್ರಮಿಸಿದರು. ಕೆಲವರು ಪ್ರಚಾರದ ಮುಂಚೂಣಿಗೆ ಬಂದಿದ್ದರೆ ಮತ್ತೆ ಹಲವರು ಎಲೆಮರೆಯ ಕಾಯಿಯಂತೆ ತಮ್ಮ ಕಾರ್ಯವನ್ನು ಮಾಡಿದರು.

ಇಂದು ಭಾರತೀಯ ಮಹಿಳೆ ಎಲ್ಲ ಕ್ಷೇತ್ರಗಳಲ್ಲಿ (ಧಾರ್ಮಿಕ, ಸಾಮಾಜಿಕ. ಸಾಹಿತ್ಯಿಕ, ರಾಜಕೀಯ ಮತ್ತು ಆಧುನಿಕ ತಂತ್ರಜ್ಞಾನ ಬೆರೆತ ವಿಜ್ಞಾನ) ತನ್ನ ಪ್ರತಿಭೆಯ ಛಾಪನ್ನು ಮೂಡಿಸುತ್ತ ಪ್ರಪಂಚದಾದ್ಯಂತ ಎಲ್ಲರ ಗಮನ ಸೆಳೆಯುವ ಸಾಧನೆಗಳನ್ನು ಮಾಡುತ್ತಿರುವುದು ಭಾರತೀಯರೆಲ್ಲರಿಗೆ ಹೆಮ್ಮೆಯ ವಿಷಯವಾಗಿದೆ. ಹೆಣ್ಣನ್ನು ಅತ್ಯಂತ ಗೌರವದಿಂದ ನೋಡುವ ನಮ್ಮ ಪರಂಪರೆಯಲ್ಲಿ 'ಮಾತೃದೇವೋಭವ' ಎಂದು ಪೂಜ್ಯ ಸ್ಥಾನ ನೀಡಿರುವ ನಮ್ಮ ಸಂಸ್ಕೃತಿಯಲ್ಲಿ 'ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು' ಎಂದು ಪರಿಭಾವಿಸುವ ನಮ್ಮ ನೆಲದಲ್ಲಿ ಮಹಿಳೆ ಎಂದಿಗೂ ಸಶಕ್ತಳೂ, ಆದರ್ಶಪ್ರಾಯಳೂ ಆಗಿದ್ದಾಳಲ್ಲದೆ ಹೊಸದಾಗಿ ತನ್ನ ಮಾನ್ಯತೆಯನ್ನು ಪಡೆದುಕೊಳ್ಳಬೇಕಾಗಿಲ್ಲ. ಆಕೆ ಎಂದಿಗೂ ಸಶಕ್ತಳು, 'ವಜ್ರಾದಪಿಕಠೋರಾನಿ, ಮೃದೂನಿಕುಸುಮಾದಪಿ' ಎನ್ನುವಂತೆ ಆಕೆಯದು ಎಲ್ಲ ಬಗೆಯ ಕಾರ್ಯಗಳನ್ನು ನಿರ್ವಹಿಸಬಲ್ಲ ಧೀರವ್ಯಕ್ತಿತ್ವ, ಅಂತೆಯೇ ಭಾರತೀಯ ನಾರಿ ಸರ್ವಮಾನ್ಯಳು, ಸಮರ್ಥಳು ಎಂಬ ಗೌರವಕ್ಕೆ ಪಾತ್ರಳಾಗಿದ್ದಾಳೆ. ಅಂತಾರಾಷ್ಟ್ರೀಯ ಮಹಿಳಾ ದಿನದಂದು ಇವರೆಲ್ಲರನ್ನೂ ಗೌರವದಿಂದ ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ ಮತ್ತು ಇವರ ದಾರಿಯಲ್ಲಿ ನಡೆಯುವುದೂ ನಮ್ಮ ಗುರಿಯಾಗಿರಬೇಕು. ●

**ಸಣ್ಣವನೆಂದು ಹೇಳಿಕೊಳ್ಳುವವನು ನಿಜವಾಗಿಯೂ ದೊಡ್ಡವನಾಗಿರುತ್ತಾನೆ.**

➢ ಪುಟ 5 ರಿಂದ.....

ಇತ್ಯಾದಿಗಳಿಂದ ತಯಾರಿಸಿ ನೈಸರ್ಗಿಕ ಬಣ್ಣ ಹಚ್ಚುವುದರ ಮೂಲಕ ಹಬ್ಬ ಆಚರಿಸುವುದು

**ಪ್ರಸ್ತುತ ಆಚರಣೆ** ದೇಶದ ವಿವಿಧ ಪ್ರದೇಶಗಳಲ್ಲಿನ ಸಂಸ್ಕೃತಿಯಂತೆ ಹೋಳಿ ಹಬ್ಬ ಆಚರಿಸುವುದನ್ನು ನಾವು ನೋಡುತ್ತೇವೆ. ಉತ್ತರ ಮತ್ತು ದಕ್ಷಿಣ ಕರ್ನಾಟಕದ ಆಚರಣೆ ಭಿನ್ನವಾಗಿದ್ದರೆ, ಉತ್ತರ & ದಕ್ಷಿಣ ಭಾರತದ ಆಚರಣೆಯೂ ಭಿನ್ನತೆಯಿಂದ ಕೂಡಿದೆ. ಆದರೂ ದೇಶದ ಆಚರಣೆಯ ಉದ್ದೇಶ ಒಂದೇ ಆಗಿರುತ್ತದೆ.

ಆದರೆ ಪ್ರಸ್ತುತ ಆಚರಣೆ ನೈಸರ್ಗಿಕ ಬಣ್ಣಗಳನ್ನು ಉಪಯೋಗಿಸದೇ ಆರೋಗ್ಯಕ್ಕೆ ಹಾನಿಕಾರಕವಾದ ರಾಸಾಯನಿಕಗಳಿಂದ ಕೂಡಿದ ವಿವಿಧ ದ್ರಾವಣಗಳನ್ನು ಬಳಸಿ ಕೃತಕವಾಗಿ ತಯಾರಿಸಿದ ಬಣ್ಣಗಳನ್ನು ಹಚ್ಚುವುದು, ಇದಕ್ಕಾಗಿ ವಿವಿಧ ಕಂಪನಿಗಳು ಈ ಸಂದರ್ಭವನ್ನು ಲಾಭಗಳಿಸಲು ಅಂತಹ ಬಣ್ಣಗಳನ್ನು ತಯಾರಿಸಿ ದುರುಪಯೋಗ ಪಡಿಸಿಕೊಳ್ಳುವುದು, ಯುವಕರು ಡಿ.ಜಿ ಗಳ ಮೂಲಕ ಕಿವಿಗಡಚಿಕ್ಕುವಂತೆ ಮ್ಯೂಸಿಕ್ ಹಾಕಿ ಕುಣಿದು ಕುಪ್ಪಳಿಸಿ ಅಸಭ್ಯವಾಗಿ ವರ್ತಿಸುವುದು, ರಾಸಾಯನಿಕ ಬಣ್ಣಗಳನ್ನು ಎಲ್ಲೆಂದರಲ್ಲಿ ಚೆಲ್ಲಿ ಪರಿಸರಕ್ಕೆ ಧಕ್ಕೆ ಮಾಡುವುದು ಇವುಗಳಿಗೆ ಕಡಿವಾಣ ಹಾಕಬೇಕಾಗಿದೆ. ಆದ್ದರಿಂದ ಈ ಹಬ್ಬದ ಸದುದ್ದೇಶ ಅರ್ಥ ಮಾಡಿಕೊಂಡು ನಾವುಗಳು ಸ್ವಸ್ಥ ಮಾನಸಿಕ ವ್ಯಕ್ತಿತ್ವದ ವ್ಯಕ್ತಿಯಾಗಲು, ಸದೃಢ ಸಮಾಜ ನಿರ್ಮಾಣ ಮಾಡಲು ಯುವ ಪೀಳಿಗೆಗೆ ಸಾಧಕ ಬಾಧಕಗಳನ್ನು ತಿಳಿಸುತ್ತಾ ನಾವೆಲ್ಲರೂ ಸಂತೋಷದಿಂದ ಹೋಳಿ ಹಬ್ಬವನ್ನು ಆಚರಿಸೋಣ. ಬಂಧುತ್ವ ಬೆಳೆಸೋಣ. ಸರ್ವರಿಗೂ ಹೋಳಿ ಹಬ್ಬದ ಶುಭಾಶಯಗಳು.


## ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಾರೂಪ

(ಪ್ರಾರೂಪ 8, ವಿಧಿ 8)

| | | |
|---|---|---|
| ಪ್ರಕಟಣೆಯ ಸ್ಥಳ | : | ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಪ್ರಕಾಶಕ | : | ಜೆ. ಎಂ. ಜೋಶಿ<br>ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) |
| ಮಾಲೀಕತ್ವ | : | ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.)<br>ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಸಂಪಾದಕ | : | ಜೆ. ಎಂ. ಜೋಶಿ (ಮೇಲಿನದೇ ವಿಳಾಸ) |
| ಭಾರತದ ಪ್ರಜೆಯೇ | : | ಹೌದು |
| ಮುದ್ರಕ | : | ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು – 560 019 |

ಮೇಲೆ ಕೊಟ್ಟಿರುವ ವಿಷಯಗಳು ನನ್ನ ನಂಬಿಕೆಯಲ್ಲಿ ಪೂರ್ಣ ಸತ್ಯವೆಂದು ನಾನು ಘೋಷಿಸುತ್ತೇನೆ.

ಬೆಂಗಳೂರು (ಸಹಿ) ಜೆ. ಎಂ. ಜೋಶಿ
1.3.2022 ಪ್ರಕಾಶಕ


# ಭರವಸೆಯ ಬೆಳಕು

ಕನ್ನಡದ ಕೂಗಾಗಿ ಕನ್ನಡದ ಕಂದಗಳೆ
ಕನ್ನಡದ ಕಂಕಣವ ಕೈಕಟ್ಟಿರೇ ಕರ್ನಾಟಿಗರೆ
ಕನ್ನಡವ ಕಾಯುವ ಕಟ್ಟಾಳಾಗಿ ಕನ್ನಡಿಗರೆ
ಕನ್ನಡದ ಕೂಗಾಗಿ ಕನ್ನಡದ ಕಂದಗಳೆ

ಕನ್ನಡದ ಕದಾಳಿಕೆ (ಧ್ವಜ) ಯ ಕಟ್ಟೆಸಕವು ಕಂಡು
ಕನ್ನಡದ ಕಿಚ್ಚುಚ್ಚುವ ಕೈಂಕರ್ಯ ಕೈಗೊಂಡು
ಕನ್ನಡದ ಕಂಪನ್ನು ಖಗೋಲಾಚೆಗೆ ಕಳುಹಿಸಿ
ಕನ್ನಡದ ಕೂಗಾಗಿ ಕನ್ನಡದ ಕಂದಗಳೆ

ಕಬಿನಿ ಕೃಷ್ಣೆ ಕಾವೇರಿಯರ ಕೂಡಲವಾಗಿ
ಕೇತಕಿ ಕಮಲ ಕನಕಗಳ ಕಂಪಾಗಿ
ಕುದ್ರಮಲೈ ಕುಟಶ್ರೀಗಂಧಗಳ ಕ್ಷಿತಿಜವಾಗಿ
ಕನ್ನಡದ ಕೂಗಾಗಿ ಕನ್ನಡದ ಕಂದಗಳೆ

ಕೇಗಿಯ ಕೇಕಾರ ಕೋಗಿಲೆಯ ಕೂಹೂರವವಾಗಿ
ಕಯಮೆ ಕಡಲೆ ಕಲ್ಲಂಗಡಿಗಳ ಕಣಜವಾಗಿ
ಕುತ್ಕೀಲ ಕಮ್ಮರಿ ಕಾರಂಜಿಗಳಂತೆ ಕಮನೀಯವಾಗಿ
ಕನ್ನಡದ ಕೂಗಾಗಿ ಕನ್ನಡದ ಕಂದಗಳೆ

ಕೊಡವ ಕೊಂಕಣ ಕದಂಬ ಕಡುಗಲಿಗಳ ಕುಡಿಯಾಗಿ
ಕುಮಾರವ್ಯಾಸ ಕನಕದಾಸ ಕಲ್ಯಾಣ ಶರಣರ ಕೊನರಾಗಿ
ಕುವೆಂಪು ಕಣವಿ ಕಾರಂತ ಕವಿಗಳ ಕಾವ್ಯರಸವಾಗಿ
ಕನ್ನಡದ ಕೂಗಾಗಿ ಕನ್ನಡದ ಕಂದಗಳೆ

ಕನ್ನಡವೇ ಸತ್ಯ ಕನ್ನಡವೇ ನಿತ್ಯವೆಂದು
ಕನ್ನಡವ ಮರೆಯದಿರೆ ಕನ್ನಡದ ಕಂದಗಳೆ




ಕವಿ: ರೇಣುಕಾಚಾರ್ಯ ಸ್ಥಾವರಮಠ
ಮೊ: 8277617911


## ಮಾತು ಮಾಣಿಕ್ಯ

ಅಜ್ಞಾನ–ಆಲಸ್ಯಗಳಿಂದ ಆಗಾಗ ಜಡಗಟ್ಟುವ ಸಮಾಜ ವನ್ನು ಜಾಗೃತಗೊಳಿಸಿ, ಅಲ್ಲಿ ಸಂಸ್ಕೃತಿಯ ಜ್ಯೋತಿಯನ್ನು ಬೆಳಗಿಸಲು ಮಾತಿನ ಜ್ಯೋತಿರ್ಲಿಂಗವೇ ಬೇಕು !

ಅಸಂಬದ್ಧವಾದ ಮಾತು ಹರಟೆ ಎನಿಸಿಕೊಳ್ಳುತ್ತದೆ. ಆದರೆ ಸುಸಂಬದ್ಧವಾದ ಹಾಗೂ ಸಾರವತ್ತಾದ ಮಾತೇ ವಾಣೀ ಸ್ವರೂಪಳಾದ ಶಾರದಾಮಾತೆ, ಜ್ಞಾನದಾತೆ ಎಂಬುದರಲ್ಲಿ ಎರಡು ಮಾತಿಲ್ಲ.

– ಸ್ವಾಮಿ ಪುರುಷೋತ್ತಮಾನಂದ

# ಗುರು–ಶಿಷ್ಯ ಸಂಬಂಧ

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಗುರು–ಶಿಷ್ಯ ಸಂಬಂಧಕ್ಕೆ ಬಹಳ ಮಹತ್ತ್ವವಿದೆ. ಗುರುವನ್ನು ದೇವತಾ ಸ್ವರೂಪಿಯೆಂದು ಪರಿಭಾವಿಸುವ ನಾವು ಗುರುವನ್ನು ತ್ರಿಮೂರ್ತಿಗಳಿಗೆ ಸಮೀಕರಿಸುತ್ತೇವೆ. ಗುರುವಿಗೆ ಸರ್ವಸಮರ್ಪಣೆ ಮಾಡಿಕೊಂಡಾಗ ಮಾತ್ರ ಶಿಷ್ಯನ ಉದ್ಧಾರವಾಗುವುದೆಂದು ನಂಬುತ್ತೇವೆ. ಆಗ ಮಾತ್ರ ಗುರುವು ತನ್ನೆಲ್ಲ ಜ್ಞಾನವನ್ನು ಶಿಷ್ಯನಿಗೆ ಧಾರೆಯೆರೆದು ಅವನ ವ್ಯಕ್ತಿತ್ವವನ್ನು ಸರ್ವಾಂಗೀಣವಾಗಿ ರೂಪುಗೊಳಿಸುತ್ತಾನೆ. ನಮ್ಮ ಪುರಾಣಗಳಲ್ಲಿ ಮಾತ್ರವಲ್ಲದೆ ಇತಿಹಾಸದಲ್ಲಿ ಕೂಡ ಇಂತಹ ಆದರ್ಶ ಗುರು–ಶಿಷ್ಯರ ಉದಾಹರಣೆಗಳು ದೊರೆಯುತ್ತವೆ. ರಾಮಕೃಷ್ಣ–ವಿವೇಕಾನಂದರು, ಸಮರ್ಥ ರಾಮದಾಸರು–ಶಿವಾಜಿ, ವಿದ್ಯಾರಣ್ಯರು–ಹಕ್ಕ, ಬುಕ್ಕರು, ಸಾಂದೀಪನಿ ಋಷಿಗಳು–ಕೃಷ್ಣ, ಬಲರಾಮ ಹೀಗೆ. ಯೋಗ್ಯ ಗುರುವನ್ನು ಪಡೆಯುವುದು ಹೇಗೆ ಸುಲಭವಲ್ಲವೋ ಹಾಗೆಯೇ ಯೋಗ್ಯ ಶಿಷ್ಯನಿಗಾಗಿ ಗುರುವಾದವನು ಸಹಕಾಯುವಂತಾಗುತ್ತದೆ.

ಇದೀಗ ತಾನೇ ದಿ.12.3.2024 ರಂದು ಶ್ರೀರಾಮಕೃಷ್ಣ ಪರಮ ಹಂಸರ ಜನ್ಮ ದಿನಾಚರಣೆ ನಡೆದಿದೆ. ಒಂದೂವರೆ ಶತಮಾನಕ್ಕೂ ಮೀರಿ ಕಾಲವು ಕ್ರಮಿಸಿದ್ದರೂ ಇಂದಿಗೂ ಯುಗ ಪುರುಷನಾಗುಳಿದು, ಯುವ ಜನರ ಆದರ್ಶ ವ್ಯಕ್ತಿಯಾಗಿರುವ ಸಾಮಿ ವಿವೇಕಾನಂದರ ವ್ಯಕ್ತಿತ್ವ ಕೇವಲ ಭಾರತೀಯರಿಗೆ ಮಾತ್ರವಲ್ಲ, ಅಂದೂ ಕೂಡ ಜಗತ್ತಿನಾದ್ಯಂತ ಅಸಂಖ್ಯಾತ ಜನರ ಪಾಲಿಗೆ ಆದರ್ಶ ವ್ಯಕ್ತಿಯೆನಿಸಿಕೊಂಡಿದ್ದರು, ಮಾತ್ರವಲ್ಲ, ಇಂದೂ ಸಹ ಅವರ ವ್ಯಕ್ತಿತ್ವದ ವರ್ಚಸ್ಸು ಎಲ್ಲ ಕಡೆ ಉಳಿದುಕೊಂಡಿದೆಯೆಂದರೆ ಅದು ಉತ್ಪ್ರೇಕ್ಷೆಯ ಹೇಳಿಕೆಯಲ್ಲ. 1893 ರಲ್ಲಿ ಚಿಕಾಗೋದಲ್ಲಿ ವಿವೇಕಾನಂದರು ನೀಡಿದ ಉಪನ್ಯಾಸದ ಪ್ರಭಾವ ಇಂದಿಗೂ ಅದನ್ನು ಕೇಳಿದವರಿಗೆಲ್ಲ ಹೊಚ್ಚ ಹೊಸದಾಗಿಯೇ ಉಂಟಾಗುತ್ತದೆ. ಇಂತಹ ಒಂದು ಅದ್ಭುತ ವ್ಯಕ್ತಿಯನ್ನು ರೂಪಿಸಿದ್ದು ಅವರ ಗುರು ಶ್ರೀರಾಮಕೃಷ್ಣರು. ಈ ಗುರು –ಶಿಷ್ಯ ಸಂಬಂಧ ಬೆಳೆದು ಗಟ್ಟಿಯಾದ ಬಗೆಯೇ ಸ್ವಾರಸ್ಯಕರವಾದುದು.

ಸ್ವಾಮಿ ವಿವೇಕಾನಂದರು ನರೇಂದ್ರನಾಗಿದ್ದಾಗ ಅಂದರೆ ಬಾಲ್ಯದಿಂದಲೂ ಹಲವು ಪ್ರಶ್ನೆಗಳು ಅವರನ್ನು ಕಾಡಿಸುತ್ತಿದ್ದುವು. ಅದರಲ್ಲಿ ಮುಖ್ಯವಾದುವು ದೇವರಿದ್ದಾನೆಯೇ? ಎಲ್ಲಿದ್ದಾನೆ? ನಮ್ಮ ಕಣ್ಣಿಗೆ ಕಾಣುತ್ತಾನೆಯೇ? ಎಂಬ ಪ್ರಶ್ನೆಗಳು. ಇದಕ್ಕೆ ಉತ್ತರ ಯಾರಿಂದಲೂ ಸಿಕ್ಕಿರಲಿಲ್ಲ. ಕಡೆಗೆ ಯಾರೋ ಹೇಳಿದ್ದರು. 'ನೀನು ದೇವರನ್ನು ಕಂಡ ಪ್ರತ್ಯಕ್ಷದರ್ಶಿಯ ಅನುಭವವನ್ನು ತಿಳಿಯಬೇಕೆಂದರೆ ದಕ್ಷಿಣೇಶ್ವರಕ್ಕೆ ಹೋಗಿ ರಾಮಕೃಷ್ಣರನ್ನು ಕಾಣು' ಎಂದು. ನರೇಂದ್ರ ಕೆಲವು ಗೆಳೆಯರನ್ನು ಕಟ್ಟಿಕೊಂಡು ದಕ್ಷಿಣೇಶ್ವರಕ್ಕೆ ಹೋಗಿ ರಾಮಕೃಷ್ಣರನ್ನು ಕಂಡರು. ನರೇಂದ್ರನನ್ನು ಕಂಡೊಡನೆಯೇ ಆನಂದಬಾಷ್ಪವನ್ನು ಸುರಿಸುತ್ತ ಅವನೇ ದೇವರೆಂದು ಹೇಳುತ್ತಾ 'ಏಕೆ ಬರಲು ತಡಮಾಡಿದೆ' ಎಂದು ಕೇಳುತ್ತ ಸಿಹಿ ಮತ್ತು ಹಣ್ಣನ್ನು ತಮ್ಮ ಕೈಯಾರೆ ತಿನ್ನಿಸಿ ಉಪಚರಿಸಿದ್ದರು. 'ದೇವರನ್ನು ಕಂಡಿದ್ದೀರಾ?' ಎಂಬ ಪ್ರಶ್ನೆಗೆ 'ಹೌದು, ಕಂಡಿದ್ದೇನೆ. ನಿನ್ನನ್ನು ಕಾಣುತ್ತಿರುವಷ್ಟೇ ಸ್ಪಷ್ಟವಾಗಿ ಕಂಡಿದ್ದೇನೆ'. ಎಂದು ಹೇಳಿದ್ದರು. ಮೊದಲ ಬಾರಿಗೆ ಅಂತಹ ಉತ್ತರವನ್ನು ಕೇಳಿದ ನರೇಂದ್ರನಿಗೆ ಅಚ್ಚರಿಯ ಜೊತೆಗೆ ಅವರ ಬಗೆಗೆ ಕುತೂಹಲವೂ ಹೆಚ್ಚಿತ್ತು. ಮತ್ತೆ ಮತ್ತೆ ಅವರನ್ನು ಹೋಗಿ ಭೇಟಿ ಮಾಡಿದ್ದರು. ಅವರಲ್ಲಿ ಏನೋ ಒಂದು ವಿಶೇಷ ಶಕ್ತಿಯಿದೆಯೆಂಬ ಆಕರ್ಷಣೆ ಉಂಟಾದರೂ ಗುರುವಾಗಿ ಸ್ವೀಕರಿಸುವ ಮೊದಲು ಪರೀಕ್ಷಿಸಬೇಕೆಂದು ನಿರ್ಧರಿಸಿದ್ದರು. ರಾಮಕೃಷ್ಣರು ಸಹ ನರೇಂದ್ರರನ್ನು ಬಹುಕಾಲದಿಂದ ನಿರೀಕ್ಷಿಸುತ್ತಿದ್ದರೂ ಪರೀಕ್ಷೆ ಮಾಡಬೇಕೆಂದೇ ಅವರೂ ಸಹ ನಿರ್ಧರಿಸಿದ್ದರು. ಇದು ಉತ್ತಮ ಗುರು, ಉತ್ತಮ ಶಿಷ್ಯರ ಲಕ್ಷಣ, ಪರಸ್ಪರರಲ್ಲಿ ಸಂಬಂಧ ಬೆಳೆಯುವ ಬಗೆ. ಇಬ್ಬರೂ ಒಬ್ಬರನ್ನೊಬ್ಬರು ತಮ್ಮ ತಮ್ಮ ಅಪೇಕ್ಷೆಗೆ ತಕ್ಕಂತೆ ಪರೀಕ್ಷೆ ಮಾಡಿದ್ದರು. ಇಬ್ಬರಿಗೂ ಸಮಾಧಾನವಾದ ನಂತರ ಗುರು–ಶಿಷ್ಯ ಸಂಬಂಧ ಆರಂಭವಾಗಿ ಗಾಢವಾಗಿತ್ತು.

ನರೇಂದ್ರ ರಾಮಕೃಷ್ಣರನ್ನು ಮೊದಲ ಬಾರಿಗೆ ನೋಡಿದಾಗ 18–19 ವರ್ಷವಾಗಿತ್ತು. ರಾಮಕೃಷ್ಣರಿಗೆ 45–46 ವರ್ಷಗಳ ಪ್ರಾಯದವರು .ನರೇಂದ್ರನನ್ನು ಅವರು ಮಗನಂತೆ ಪ್ರೀತಿಸುತ್ತಿದ್ದರು. ಒಬ್ಬ ತುಂಟ ಮಗ ಕೊಡುವ ಕಾಟವನ್ನೆಲ್ಲ ತಂದೆಯಂತೆ ಸಹಿಸುತ್ತಿದ್ದರು. ಏಕೆಂದರೆ ನರೇಂದ್ರ ಯಾವುದನ್ನೂ ಬಡಪೆಟ್ಟಿಗೆ ಒಪ್ಪುತ್ತಿರಲಿಲ್ಲ. ಆದರೂ ರಾಮಕೃಷ್ಣರು ಬೇಸರಮಾಡಿಕೊಳ್ಳುತ್ತಿರಲಿಲ್ಲ, 'ನಿನಗೆ ಸರಿತೋರಿದರೆ ಒಪ್ಪಿಕೊ, ಇಲ್ಲವಾದರೆ ಬೇಡ'. ಎನ್ನುತ್ತಿದ್ದರು. 'ಸತ್ಯ ದೇವಾಲಯಕ್ಕೆ ಅನಂತ ಪಥಗಳು, ನಾನು ಮಾತ್ರ ಸರಿ, ಇನ್ನೊಬ್ಬ ಸರಿಯಿಲ್ಲವೆಂದು ಭಾವಿಸಬೇಡ, ಪ್ರತಿಯೊಬ್ಬನೂ ಭಿನ್ನ ಭಿನ್ನ ದೃಷ್ಟಿಕೋನದಿಂದ ನೋಡುತ್ತಿರುವನು', ಎನ್ನುತ್ತಿದ್ದರು. ಶಿಷ್ಯನ ವಿಚಾರಶಕ್ತಿಯನ್ನು ಕುಂಠಿತಗೊಳಿಸದೆ, ಅವನನ್ನು ಇತರರ ಮೇಲೆವಾದಕ್ಕೆ ಬಿಟ್ಟು, ನೋಡಿ, ಆನಂದಿಸುತ್ತಿದ್ದರು. ಆದರೆ ಅವನನ್ನು ಅವರು ಯಾವಾಗಲೂ ಹೊಗಳುತ್ತಿರಲಿಲ್ಲ, ತಪ್ಪುಗಳು ಕಂಡುಬಂದಾಗ ನಿರ್ದಾಕ್ಷಿಣ್ಯವಾಗಿ ಎತ್ತಿತೋರುತ್ತಿದ್ದರು. ಅವರು ಶಿಷ್ಯನಿಗೆ ಜಾಗ್ರತಾವಸ್ಥೆಯಲ್ಲಿ ಮಾತ್ರವಲ್ಲ, ಸ್ವಪ್ನದಲ್ಲಿಯೂ ಬೋಧನೆಯೊಂದಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಅದು ಅವರಿಬ್ಬರಲ್ಲಿದ್ದ ಗುರು–ಶಿಷ್ಯ ಸಂಬಂಧದ ಮಹತ್ತ್ವವಾಗಿತ್ತು. ಅವರು ಜ್ಞಾನ, ಭಕ್ತಿ ಎರಡೂ ಶಿಷ್ಯನಲ್ಲಿ ಸಮ ಸಮವಾಗಿರುವಂತೆ ನೋಡಿಕೊಂಡರು.

ರಾಮಕೃಷ್ಣರು ತಮ್ಮ ಸಮಾಧಿಗೆ ಮೂರು–ನಾಲ್ಕು ದಿನಗಳಿವೆಯೆನ್ನುವಾಗ ನರೇಂದ್ರರನ್ನು ತಮ್ಮ ಬಳಿಗೆ ಕರೆದು ಎದುರಿಗೆ ಕೂರುವಂತೆ ಹೇಳಿದರು. ಅವರನ್ನೇ ದಿಟ್ಟಿಸಿ ನೋಡುತ್ತ ಧ್ಯಾನದಲ್ಲಿ ಮುಳುಗಿದರು. ಅವರ ದೇಹದಿಂದ ಒಂದು ಶಕ್ತಿಯು ಹೊರಟು ನರೇಂದ್ರರ ದೇಹವನ್ನು ಪ್ರವೇಶಿಸಿತ್ತು. ನರೇಂದ್ರರಿಗೆ ಎಚ್ಚರತಪ್ಪಿತ್ತು. ಸ್ವಲ್ಪ ಹೊತ್ತಾದ ನಂತರ ಕಣ್ತೆರೆದ ರಾಮಕೃಷ್ಣರು ನರೇಂದ್ರರಿಗೆ 'ಇನ್ನು ನಾನು ಒಬ್ಬ ಫಕೀರನಾದೆ. ನನ್ನಲ್ಲಿದ್ದ ಸರ್ವಶಕ್ತಿಗಳನ್ನು ನಿನಗೆ ಧಾರೆ ಎರೆದಿದ್ದೇನೆ. ಅದರಿಂದ ನೀನು ಅದ್ಭುತವಾದ ಕಾರ್ಯಗಳನ್ನು ಮಾಡುವೆ. ಅನಂತರ ನೀನು ಎಲ್ಲಿಂದ ಬಂದೆಯೊ ಅಲ್ಲಿಗೆ ತೆರಳುವೆ' ಎಂದು ಹೇಳಿದ್ದರು.

ನರೇಂದ್ರ ಕೂಡ ರಾಮಕೃಷ್ಣರನ್ನು ಒಂದಲ್ಲ, ಹಲವು ಬಾರಿ ಪರೀಕ್ಷೆ ಮಾಡಿ ತನ್ನ ಮನಸ್ಸಿಗೆ ಅವರೇ ತನ್ನ ಗುರುವಾಗುವಂತಹವರೆಂದು ಖಚಿತ ಪಡಿಸಿಕೊಂಡೇ ಅವರ ಶಿಷ್ಯನಾದದ್ದು. ಆಧ್ಯಾತ್ಮದ ಗುರುವಾಗಿ ಸ್ವೀಕರಿಸಬೇಕಾದರೆ ಅವರಲ್ಲಿ ಲೌಕಿಕದ ವ್ಯಾಮೋಹವಿರಿವುದೇ, ಇಲ್ಲವೇ ಎಂಬುದನ್ನು ಪರೀಕ್ಷಿಸಿ ತೃಪ್ತರಾಗಿದ್ದರು. ಅದೇ ರೀತಿ ಆ ಗುರು ನಿಜವಾಗಲೂ ದೇವರನ್ನು ಕಂಡಿರುವರೇ ಎಂಬುದರ ಪರೀಕ್ಷೆ ಕೂಡ ಮಾಡಿದ್ದರು. ಉತ್ತರವಾಗಿ ಗುರುವಿನ ಹಸ್ತ ತಲೆಯ ಮೇಲೆ ಬಂದೊಡನೆಯೇ ಅದ್ಭುತವಾದ ಅವರ್ಣನೀಯವಾದ ಅನುಭವವಾಗಿತ್ತು. ಮತ್ತೊಮ್ಮೆ ತನಗೂ ದೇವಿಯ ಸಾಕ್ಷಾತ್ಕಾರ ಮಾಡಿಸಬೇಕೆಂದು ಗುರುವಿನಲ್ಲಿ ಬೇಡಿದಾಗ ಸ್ವತಃ ದೇವಿಯನ್ನು ಪ್ರಾರ್ಥಿಸಿಕೊಳ್ಳುವಂತೆ ಹೇಳಿದ್ದರು. ಅದರಂತೆ ಪ್ರಾರ್ಥನೆ ಮಾಡಿದ ನರೇಂದ್ರರಿಗೆ ದೇವಿಯ ದರ್ಶನವಾದುದಷ್ಟೇ ಅಲ್ಲ, ತಾನು ಕೇಳಬೇಕೆಂದಿದ್ದ ಲೌಕಿಕವಾದ ಅಗತ್ಯದ ಅಂಶವೂ ಮರೆತು ಹೋಗಿತ್ತು. ಹೀಗೆ ದೇವೀ ದರ್ಶನದ ಮಹಿಮೆಯ ಅರಿವು ಮೂಡಿಸಿದ್ದರು ಅವರ ಗುರುಗಳು.

ರಾಮಕೃಷ್ಣರು ನೀಡಿದ್ದ ಮಾರ್ಗದರ್ಶನದ ಬಲದಿಂದ ನರೇಂದ್ರಸ್ವಾಮಿ ವಿವೇಕಾನಂದರಾಗಿ ಇಡೀಲೋಕದಲ್ಲಿ ಏಕಮೇವಾದ್ವಿತೀಯರಾಗಿ ರೂಪುಗೊಂಡು ಎಲ್ಲ ಕಾಲಕ್ಕೂ ಸರ್ವಮಾನ್ಯ ಮಹಾಪುರುಷರಾಗುವಂತೆ ಮಾಡಿದ್ದಷ್ಟೇ ಅಲ್ಲ, ಹಿಂದೂ ಧರ್ಮದ ಮಹತ್ತ್ವವನ್ನು ಜಗತ್ತಿನೆದುರಿಗೆ ಅನಾವರಣಗೊಳಿಸಿ ಭಾರತ ಮಾತೆಯ ಕೀರ್ತಿಪತಾಕೆಯನ್ನು ಮುಗಿಲೆತ್ತರಕ್ಕೆ ಹಾರಿಸಿದ ಮಹಾನ್ ಯೋಗಿಯಾಗಿದ್ದರು. ಮಹಾನ್ ಗುರುವಿನ ಮಹಾನ್ ಶಿಷ್ಯರೆನಿಸಿಕೊಂಡರು.

– ಚಾರುಮತಿ

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-03-2024 Date of Posting 20th or 21st of every month Posted at Periodical Rate

# ಮೂಢನಂಬಿಕೆ ಮತ್ತು ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟ ನಡೆಸುತ್ತಿರುವ ಅಸ್ಸಾಂನ ಪದ್ಮಶ್ರೀ ಡಾ॥ ಬಿರುಬಾಲಾ ರಾಭೆ

ಭಾರತದ ಈಶಾನ್ಯ ಭಾಗದ ಅಸ್ಸಾಂನಲ್ಲಿ ಕಳೆದ ಮೂರು ದಶಕಗಳಿಂದ ಮಾಟ ಮತ್ತು ವಾಮಾಚಾರದ ವಿರುದ್ಧ ಹೋರಾಡುತ್ತಾ, ಮಹಿಳಾ ದೌರ್ಜನ್ಯ ವಿರೋಧಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಜನರ ಮೂಢನಂಬಿಕೆಗಳನ್ನು ದೂರಮಾಡಲು ಪ್ರಯತ್ನ ಮಾಡುತ್ತಿರುವ ಡಾ॥ ಬಿರುಬಾಲಾ ರಾಭಾ ಅವರ ಜೀವನಗಾಥೆ ರೋಚಕವಾದುದು. ರಾಭಾ ಅವರು 1996ರಿಂದ ಹೆಣ್ಣು ಮಕ್ಕಳನ್ನು ಮಾಟಗಾತಿ ಎಂದು ಬಿಂಬಿಸುವ ಅನಿಷ್ಟದ ವಿರುದ್ಧ ಅಭಿಯಾನವನ್ನು ನಡೆಸುತ್ತಿದ್ದಾರೆ. ಅವರು 50ಕ್ಕೂ ಹೆಚ್ಚು ಮಹಿಳೆಯರನ್ನು ಮಾಟಗಾತಿಯರೆಂದು ಬಿಂಬಿಸುವುದರಿಂದ ರಕ್ಷಿಸಿದ್ದಾರೆ. ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯದ ವಿರುದ್ಧ ಕಾರ್ಯನಿರ್ವಹಿಸುವ ಮಿಷನ್ ಬಿರುಬಾಲಾವನ್ನು ಪ್ರಾರಂಭಿಸಿದರು.

1985ರ ಆ ಘಟನೆ ಅವರನ್ನು ಮೂಢನಂಬಿಕೆಗಳ ವಿರುದ್ಧ ಸೆಟೆದು ನಿಲ್ಲುವಂತೆ ಮಾಡಿತು. ಮಗನಿಗೆ ಆರೋಗ್ಯದಲ್ಲಿ ಏರುಪೇರು ಕಂಡುಬಂದಾಗ ಮಗನ ಮಾನಸಿಕ ಅಸ್ವಸ್ಥತೆಯ ಕಾರಣ ರಾಭಾ ಮಾಡಿದ ಮಾಟವೆಂದೂ. ಆಕೆ ಮಾಟಗಾತಿ ಎಂದೂ ಜನರು ಬಿಂಬಿಸುವ ಪ್ರಯತ್ನ ಮಾಡಿದರು. ವೈದ್ಯನೆಂದು ಹೇಳಿಕೊಂಡಿದ್ದಾತನ ಬಳಿ ಭೇಟಿ ಕೊಟ್ಟಾಗ ಮಾಟ ಮಾಡಿದ ಕಾರಣ ಮಗನ ಆಯುಷ್ಯ ಕೆಲವು ದಿನಗಳಷ್ಟೇ ಎಂದು ಭವಿಷ್ಯ ನುಡಿದರು. ಆದರೆ ಅದು ಸುಳ್ಳೆಂದು ಸಾಬೀತಾಯಿತು. ಆಗ ಇಂತಹ ಮೂಢನಂಬಿಕೆಗಳಿಗೆ ಮೋಸ ಹೋಗಬಾರದೆಂದು ನಿರ್ಧರಿಸಿದ ರಾಭಾ ಮೋಸದ ಚಟುವಟಿಕೆಗಳನ್ನು ಉತ್ತೇಜಿಸುವ ಮತ್ತು ಮೂಢನಂಬಿಕೆಗಳ ಸೋಗಿನಲ್ಲಿ ಚಿಕಿತ್ಸೆ ಕೊಡುವಂತೆ ನಟಿಸುವವರನ್ನು ಭೇಟಿ ಮಾಡುವುದನ್ನು ನಿಲ್ಲಿಸಿದರು. ತಮ್ಮ ನೆರೆಹೊರೆಯ ಮತ್ತು ತನ್ನಂತೆ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಮೂಢನಂಬಿಕೆ ಮತ್ತು ಮಹಿಳಾ ದೌರ್ಜನ್ಯದ ಸಾಧ್ಯತೆಗಳನ್ನು ವಿವರಿಸಿ ಅದರ ವಿರುದ್ಧ ಹೋರಾಡುವಂತೆ ಪ್ರೇರೇಪಿಸಿದರು.

ಆರಂಭದಲ್ಲಿ, ರಾಭಾ ಅವರು ತಮ್ಮ ಸ್ಥಳೀಯ ಗ್ರಾಮದಲ್ಲಿ ಮಹಿಳೆಯರ ಮೇಲಾಗುತ್ತಿದ್ದ ಈ ದೌರ್ಜನ್ಯ ಸೇರಿದಂತೆ ವಿವಿಧ ಸಾಮಾಜಿಕ ಅನಿಷ್ಟಗಳ ವಿರುದ್ಧ ಜಾಗೃತಿ ಮೂಡಿಸುವ ಮಹಿಳಾ ಸಂಘವಾದ ಠಾಕುರ್ವಿಲಾ ಮಹಿಳಾ ಸಮಿತಿಯನ್ನು ರಚಿಸಿದರು ಮತ್ತು 2006ರಲ್ಲಿ ಅಸ್ಸಾಂ ಮಹಿಳಾ ಸಮತಾ ಸೊಸೈಟಿಯಲ್ಲಿ ತೊಡಗಿಸಿಕೊಂಡರು. ಅಕ್ಕಪಕ್ಕದ ಹಳ್ಳಿಗಳಲ್ಲಿ ನಡೆಯುತ್ತಿರುವ ಪ್ರಕರಣಗಳ ಬಗ್ಗೆಯೂ ಅವರು ತಿಳಿದುಕೊಂಡರು. ಅಲ್ಲಿಯೂ ಕೂಡ ಹಲವಾರು ಮಹಿಳೆಯರನ್ನು 'ಮಾಟಗಾತಿಯರು' ಎಂದು ಬಿಂಬಿಸಿ ನಂತರ ಮನೆಯ ಆಶ್ರಯಕ್ಕೆ ಸಿಗದಂತೆ ಮಾಡಲಾಗುತ್ತಿತ್ತು.

ಪರಿಸ್ಥಿತಿಯ ತೀವ್ರತೆ ಅರಿತು ರಾಭಾ 2011ರಲ್ಲಿ ಅಸ್ಸಾಂನಲ್ಲಿ ಮಹಿಳೆಯರ ಮೇಲಾಗುತ್ತಿದ್ದ ಈ ದೌರ್ಜನ್ಯದ ವಿರುದ್ಧ ಮತ್ತು ಇತರ ಸಾಮಾಜಿಕ ಅನಿಷ್ಟಗಳ ವಿರುದ್ಧದ ಹೋರಾಟವಾಗಿ 'ಬಿರುಬಾಲಾ' ಸಂಸ್ಥೆಯನ್ನು ಹುಟ್ಟು ಹಾಕಿದರು. ಇದರ ವಿರುದ್ಧ ಕಟ್ಟುನಿಟ್ಟಿನ ಕಾನೂನುಗಳನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು. ಅವರ ಸತತ ಪ್ರಯತ್ನದಿಂದ ಅಸ್ಸಾಂ ವಿಟ್ಚ್ ಹಂಟಿಂಗ್ (ನಿಷೇಧ, ತಡೆಗಟ್ಟುವಿಕೆ ಮತ್ತು ರಕ್ಷಣೆ) ಮಸೂದೆ 2015ಕ್ಕೆ ಕಾಯ್ದೆಯಾಗಿ ಜಾರಿಗೆ ಬಂದು, ಮೂಢ ನಂಬಿಕೆಗಳು, ಮಾಟಮಂತ್ರ ಮತ್ತು ಸಾಮಾಜಿಕ ಪೂರ್ವಾಗ್ರಹಗಳನ್ನು ಮಾರಕವಾಗಿ ಪರಿಗಣಿಸುವಲ್ಲಿ ಈ ಕಾಯ್ದೆ ನಿರ್ಣಾಯಕವಾಗಿದೆ.

ಅಸ್ಸಾಂನಲ್ಲಿ ತಮ್ಮ ದಿಟ್ಟತನದ ಕೆಲಸಕ್ಕಾಗಿ ಹಲವಾರು ಪ್ರಶಸ್ತಿಗಳು ಮತ್ತು ಪುರಸ್ಕಾರಗಳೊಂದಿಗೆ ರಾಭಾ ಗುರುತಿಸಲ್ಪಟ್ಟರು. 2005ರಲ್ಲಿ ಅವರು ಈಶಾನ್ಯ ನೆಟ್‌ವರ್ಕ್ (ಅಸ್ಸಾಂನಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಹಕ್ಕುಗಳ ಸಂಸ್ಥೆ) ನಿಂದ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡರು ಮತ್ತು 2015ರಲ್ಲಿ ಗೌಹಾಟಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಅನ್ನು ನೀಡಲಾಯಿತು. 2021ರಲ್ಲಿ ಅವರು ತಮ್ಮ ಸಾಮಾಜಿಕ ಕಾರ್ಯ ಮತ್ತು ಪ್ರಚಾರಕ್ಕಾಗಿ ಭಾರತ ಸರ್ಕಾರದಿಂದ ದೇಶದ ನಾಲ್ಕನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿ ಪಡೆದರು. ಸ್ವಿಟ್ಜರ್ಲೆಂಡ್‌ನ ಜಿನೀವಾದಲ್ಲಿರುವ ಮಹಿಳಾ ವಿಶ್ವ ಶೃಂಗಸಭೆಯ ಪ್ರತಿಷ್ಠಾನದಿಂದ $1,000 ನಗದು ಬಹುಮಾನವನ್ನು ಸಹ ಪಡೆದಿದ್ದಾರೆ.

ಲಾಭೋದ್ದೇಶವಿಲ್ಲದ ಪ್ರಗತಿಪರ ಸಂಸ್ಥೆ, 'ಮಿಷನ್ ಬಿರುಬಾಲಾ' ಸಾಮಾಜಿಕ ಅನಿಷ್ಟಗಳಿಂದ ಬದುಕುಳಿದವರಿಗೆ ಬೆಂಬಲವನ್ನು ನೀಡುವಲ್ಲಿ ಮತ್ತು ಅಂತಹ ಸಾಮಾಜಿಕ ಅನಿಷ್ಟಗಳು ಹೆಚ್ಚಾಗಿ ಕಂಡುಬರುವ ಸಮುದಾಯಗಳಲ್ಲಿ ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸುವ ತನ್ನ ಬದ್ಧತೆಯನ್ನು ಇಂದಿಗೂ ಮುಂದುವರೆಸುತ್ತಿದೆ. ತಮ್ಮ ಸಮಾಜದಲ್ಲಿ ನೆಲೆನಿಂತ ಅನಾಚಾರಗಳನ್ನು ದೂರ ಮಾಡುವ ಸಲುವಾಗಿ ರಾಧಾ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ.

– ಕೃಪೆ : ಪುಂಗವ

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**

ಇ–ಮೇಲ್‌ಗೆ ಕಳುಹಿಸಿಕೊಡಿ

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com